ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್

'MUNJAVU' Kannada Weekly. KOPPA - CHM. ಫೋನ್: 114

5ನೇ ವರ್ಷ 43ನೇ ಸಂಚಿಕೆ ಕೊಪ್ಪ 19-7-1987 ಭಾನುವಾರ ಬೆಲೆ 50 ಪೈಸೆ

ಸ್ವಯಂ ಉದ್ಯೋಗ ಯೋಜನೆಗೆ ಅರ್ಜಿ ಸಲ್ಲಿಸಲು ಅವಧಿ ವಿಸ್ತರಣೆ

ಕೊಪ್ಪ: ಜಿಲ್ಲಾ ಕೈಗಾರಿಕಾ ಕೇಂದ್ರದ ವತಿಯಿಂದ ಸ್ವಯಂ ಉದ್ಯೋಗ ಯೋಜನೆಗಾಗಿ ಅರ್ಜಿ ಸಲ್ಲಿಸಲು ಕೊನೇ ದಿನಾಂಕವನ್ನು 31-7-1987ರವರೆಗೆ ವಿಸ್ತರಿಸಲಾಗಿದೆ.

ಕನಿಷ್ಠ ವಿದ್ಯಾರ್ಹತೆ: ಎಸ್ಸೆಸ್ಸೆಲ್ಸಿ, ವಯೋಮಿತಿ: 18ರಿಂದ 35 ವರ್ಷ. ಕೈಗಾರಿಕೆಗೆ 35,000 ರೂ., ಸೇವಾ ಉದ್ಯಮಕ್ಕೆ 25,000 ರೂ. ಹಾಗೂ ವ್ಯಾಪಾರಕ್ಕೆ 15,000 ರೂ ಗಳವರೆಗೆ ಗರಿಷ್ಠ ಸಾಲ ದೊರೆಯುತ್ತದೆ.

ಯಾವ ಉದ್ಯಮ ಆರಂಭಿಸಬಹುದೆಂಬ ಬಗ್ಗೆ ಹಾಗೂ ಇನ್ನಿತರ ಮಾಹಿತಿಗಳನ್ನು ಆಯಾ ತಾಲ್ಲೂಕಿನ ಕೈಗಾರಿಕಾ ವಿಸ್ತರಣಾಧಿಕಾರಿಗಳಿಂದ ಪಡೆಯಬಹುದು.

ಜನ ಪ್ರತಿನಿಧಿಗಳು, ಹಿರಿಯ ಅಧಿಕಾರಿಗಳಿಂದ ಕೊನೇ ಗಳಿಗೆವರೆಗಿನ

ಸಂಧಾನ ಯತ್ನಗಳಿಗೆ ಶಂಕರ್ ಸಾರಿಗೆ ಮಾಲೀಕರ ನಿರ್ಲಕ್ಷ್ಯ ಧೋರಣೆ :

ತಪ್ಪದ ಮುಷ್ಕರ: ಬಹುತೇಕ ಶಾಂತಿಯುತ, ಯಶಸ್ವಿ

ಕೊಪ್ಪ: ಶಂಕರ್ ಸಾರಿಗೆ ಸಂಸ್ಥೆಯ ಇತಿಹಾಸದಲ್ಲಿ ಎರಡನೆಯದಾದ ಪೂರ್ಣ ಪ್ರಮಾಣದ ಕಾರ್ಮಿಕ ಮುಷ್ಕರ ಜುಲೈ 18ರಿಂದ ಆರಂಭವಾಗಿದೆ. ಎ. ಐ. ಟಿ. ಯು. ಸಿ. ನೇತೃತ್ವದ ಚಿಕ್ಕಮಗಳೂರು ಜಿಲ್ಲಾ ಟ್ರಾನ್ಸ್‌ಪೋರ್ಟ್ ಅಂಡ್ ಜನರಲ್ ಮಜ್ದೂರ್ ಸಂಘ ಈ ಮುಷ್ಕರವನ್ನು ಸಂಘಟಿಸಿದೆ.

ಜೀವನಾವಶ್ಯಕತೆಗೆ ತಕ್ಕ ವೇತನ ಮತ್ತು ತುಟ್ಟಿ ಭತ್ಯದ ಹೆಚ್ಚಳ, 'ಈಗಿನ 14-15 ಗಂಟೆಗೆ ಬದಲು' ದಿನಕ್ಕೆ 8 ಗಂಟೆ ಕೆಲಸ, ಹೆಚ್ಚಿನ ಕೆಲಸಕ್ಕೆ ಭತ್ಯೆ, ವೈದ್ಯಕೀಯ ಸೌಲಭ್ಯ, ಮನೆ ಬಾಡಿಗೆ, ಯೂನಿಫಾರಂ ಮತ್ತಿತರ ಭತ್ಯೆಗಳು, ಕಾರ್ಮಿಕರಿಗೆ ಸಿಗಬೇಕಾದ ಕನಿಷ್ಠ ಸೌಕರ್ಯಗಳ ನೀಡಿಕೆ, ರಜಾ ಸೌಲಭ್ಯಗಳು, ಕೆಲವು ಕಾರ್ಮಿಕರ ಮೇಲೆ ವಿನಾ ಕಾರಣ (ಯೂನಿಯನ್ ಚಟುವಟಿಕೆಗಾಗಿ) ತೆಗೆದುಕೊಂಡಿರುವ ವರ್ಗಾವಣೆ, ಅಮಾನತು ಮುಂತಾದ ಕ್ರಮಗಳನ್ನು ಕೈ ಬಿಡುವುದು—ಮುಂತಾದುವು ಕಾರ್ಮಿಕರ ಪ್ರಮುಖ ಬೇಡಿಕೆಗಳಾಗಿವೆ.

ವಿಫಲವಾದ ಸಂಧಾನಯತ್ನ

ಈ ಮುಷ್ಕರವನ್ನು ತಪ್ಪಿಸುವುದಕ್ಕಾಗಿ ಹಿರಿಯ ಅಧಿಕಾರಿಗಳು ಹಾಗೂ ಉನ್ನತ ಕಾರ್ಮಿಕ ನಾಯಕರುಗಳು ಕೊನೇ ಘಳಿಗೆಯವರೆಗೂ ನಡೆಸಿದ ಪ್ರಯತ್ನಗಳು ಫಲ ನೀಡಲಿಲ್ಲವೆನ್ನಲಾಗಿದೆ.

ಜು. 16 ರಂದು ಚಿಕ್ಕಮಗಳೂರಿನಲ್ಲಿ ಜಿಲ್ಲಾಧಿಕಾರಿ ಅನಿತಾ ಕೌಲ್‌ರವರನ್ನು ಭೇಟಿ ಮಾಡಿದ್ದ ಮಾಲೀಕರು, ಮುಷ್ಕರದ ಭಯದ ಅಡಿಯಲ್ಲಿ ಯಾವುದೇ ಬೇಡಿಕೆಗೆ ಒಪ್ಪಲು ತಾವು ಸಿದ್ಧರಿಲ್ಲವೆಂದೂ, ಮುಷ್ಕರವನ್ನು ಹಿಂತೆಗೆದುಕೊಂಡರೆ ಮಾತ್ರ ಬೇಡಿಕೆಗಳನ್ನು ಪರಿಶೀಲಿಸಬಹುದೆಂದೂ ತಿಳಿಸಿದ್ದರೆನ್ನಲಾಗಿದೆ.

ಎ. ಐ. ಟಿ. ಯು. ಸಿ. ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿಗಳೂ, ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ನೌಕರರ ಫೆಡರೇಶನಿನ ಉಪಾಧ್ಯಕ್ಷರೂ ಆಗಿರುವ ಎಚ್. ವಿ. ಅನಂತ ಸುಬ್ಬರಾವ್ ಅದೇ ದಿನ ಕೊಪ್ಪಕ್ಕೆ ಬರುವ ಮಾರ್ಗದಲ್ಲಿ ಜಿಲ್ಲಾಧಿಕಾರಿಗಳನ್ನು ಭೇಟಿ ಮಾಡಿದಾಗ ಮಾಲೀಕರ ಈ ಶರತ್ತನ್ನು ಅವರ ಮುಂದಿಡಲಾಯಿತು.

ಅದಕ್ಕೆ ಅನಂತ ಸುಬ್ಬರಾವ್— "ನಾವೇನೂ ಯಾವುದೇ ರೀತಿ ಬೆದರಿಕೆ ಒಡ್ಡಿಲ್ಲ. ಕಾರ್ಮಿಕರ ಈ ಬೇಡಿಕೆಗಳನ್ನು 7 ತಿಂಗಳ ಹಿಂದೆಯೇ ಮಂಡಿಸಲಾಗಿದೆ. ಈವರೆಗೂ ಈಡೇರಿಸಿಲ್ಲ. ಮಾಲೀಕರ ಗಮನ ಸೆಳೆಯಲು ಕಳೆದ ಒಂದು ತಿಂಗಳ ಕಾಲ ಕಾರ್ಮಿಕರು ಉಪವಾಸ ನಡೆಸಿದ್ದು, ಈ ಅವಧಿಯಲ್ಲಿ ಮೂರು ಬಾರಿ ಸಂಧಾನ ಸಭೆಗಳಾದರೂ ಯಾವುದೇ ಫಲ ದೊರೆಯಲಿಲ್ಲ.

ಆದರೆ ಬದಲು ಈಗ ಮಾಲೀಕರೇ ಅಧಿಕಾರ ಯಂತ್ರವನ್ನು ಪೂರ್ತಿ ತಮ್ಮ ಬಾಗಿಲಿಗೆ ಕರೆಸಿಕೊಂಡಿದ್ದಾರೆ. ಪೋಲೀಸರು, ರಿಸರ್ವ್ ವ್ಯಾನುಗಳು, ಉನ್ನತ ಅಧಿಕಾರಿಗಳು—ಈ ಎಲ್ಲವೂ ಮಾಲೀಕರ ರಕ್ಷಣೆಗಿರುವುದು ನೋಡಿದರೆ ಹೆದರಿಕೆಯಾಗಬಹುದಾದುದು ಕಾರ್ಮಿಕರಿಗೇ ಹೊರತು ಮಾಲೀಕರಿಗಲ್ಲ.

ಇದರ ಬದಲು ಅವರು ಅತ್ಯಂತ ಮುಖ್ಯವಾದ ಒಂದೆರಡು ಬೇಡಿಕೆಗಳ ಬಗ್ಗೆ ಕಡೇ ಪಕ್ಷ ತಾತ್ಕಾಲಿಕ ಪರಿಹಾರವನ್ನಾದರೂ ಘೋಷಿಸಲಿ, ನಾವು ಮುಷ್ಕರ ಹಿಂತೆಗೆಯುತ್ತೇವೆ. ಮತ್ತೆ ಕೂತು ಎಲ್ಲ ಬೇಡಿಕೆಗಳನ್ನೂ ಚರ್ಚಿಸಿ ಒಂದು ತಿಂಗಳೊಳಗೆ ಇತ್ಯರ್ಥಗೊಳಿಸಲಿ.

ಅದು ಬಿಟ್ಟು, ಇಷ್ಟು ದಿನ ಅರ್ಥಪೂರ್ಣ ಮಾತುಕತೆಗೇ ಅವಕಾಶ ಕೊಡದೆ ಈಗ 'ಮುಷ್ಕರ ಹಿಂತೆಗೆದರೆ ಮಾತುಕತೆ ಬಗ್ಗೆ ಪರಿಶೀಲಿಸೋಣ' ಎಂದರೆ ಅದಕ್ಕೆ ಕಾರ್ಮಿಕರು ಒಪ್ಪಲು ಸಿದ್ಧರಿಲ್ಲ. ಅವರಾಗಲೇ ಮುಷ್ಕರದ ನಿರ್ಧಾರ ಮಾಡಿಯಾಗಿದೆ. ಏನಾದರೂ ಪರಿಹಾರ ಕಾಣದೇ ಅದನ್ನು ಹಿಂತೆಗೆಯಲು ಅವರು ಒಪ್ಪುವುದಿಲ್ಲ" ಎಂದರು.

ಆಗ ಪುನಃ ಜಿಲ್ಲಾಧಿಕಾರಿಗಳು ರಮೇಶರಾವ್ ಅವರನ್ನು ಸಂಪರ್ಕಿಸಲು ಯತ್ನಿಸಿದರು. ಆದರೆ ಅವರು ಎಲ್ಲಿದ್ದಾರೆಂಬುದು ಗೊತ್ತಿಲ್ಲವೆಂದು ಕಂಪೆನಿಯ ಹಿರಿಯ ಅಧಿಕಾರಿಗಳು ಮಧ್ಯಾಹ್ನದವರೆಗೂ ಕಣ್ಣುಮುಚ್ಚಾಲೆಯಾಡಿದರೆನ್ನಲಾಗಿದೆ.

ಅನಂತರ ಜು. 17 ರ ಸಂಜೆ ಜಿಲ್ಲಾಧಿಕಾರಿಗಳು, ಜಿಲ್ಲಾ ಪೋಲೀಸ್ ಮುಖ್ಯಾಧಿಕಾರಿಗಳು ಕೊಪ್ಪಕ್ಕೆ ಬಂದು ಶಾಸಕರು, ಸ್ಥಳೀಯ ಜನ ಪ್ರತಿನಿಧಿಗಳು, ಕಾಂಗ್ರೆಸ್ ಮುಖಂಡರು ಮುಂತಾದವರ ಸಮ್ಮುಖದಲ್ಲಿ ಮತ್ತೊಮ್ಮೆ ಮಾತುಕತೆ ಏರ್ಪಡಿಸಲು ಶ್ರಮಿಸಿದರು. ಆದರೆ ರಾತ್ರಿ ಬಹಳ ಹೊತ್ತಿನವರೆಗೆ ಕಾದರೂ ರಮೇಶ್ ರಾವ್ 'ಪತ್ತೆ'ಯಾಗದಿದ್ದಾಗ ಎಲ್ಲರೂ ಬೇಸತ್ತು ಮುಷ್ಕರ ನಿಲ್ಲಿಸುವ ಈ ಅಂತಿಮ ಪ್ರಯತ್ನವನ್ನು ಕೈ ಬಿಟ್ಟರು.

"ಮುಷ್ಕರ ಕಾನೂನು ಬಾಹಿರವಲ್ಲ"

ಈ ಬಾರಿ ಕಾರ್ಮಿಕರು ಆರು ತಿಂಗಳಿಗೂ ಹೆಚ್ಚು ಕಾಲದಿಂದ ತಮ್ಮ ಬೇಡಿಕೆಗಳ ಈಡೇರಿಕೆಗಾಗಿ ಸಂಧಾನದ ಎಲ್ಲ ಮಾರ್ಗಗಳನ್ನೂ ಪ್ರಯತ್ನಿಸಿ ವಿಫಲರಾಗಿ ಮುಷ್ಕರದ ನಿರ್ಧಾರ ಕೈಗೊಂಡಾಗ ಕಾನೂನು ರೀತ್ಯಾ 15 ದಿನ ಮೊದಲು ಮುಷ್ಕರದ ನೋಟಿಸನ್ನು ಕಂಪೆನಿಗೆ ಜಾರಿ ಮಾಡಿದ್ದರು.

ಆದರೆ ಜು. 9ರ ಸಂಧಾನ ವಿಫಲವಾಗಿ, ಕಾರ್ಮಿಕ ಮುಖಂಡರು ಇನ್ನೊಂದು ಸುತ್ತಿನ ಮಾತುಕತೆಗೆ ದಿನ ಗೊತ್ತುಪಡಿಸಿ ತಿಳಿಸುವಂತೆ ಉಪ ಕಾರ್ಮಿಕ ಕಮಿಶನರ್‌ರಿಗೆ ತಿಳಿಸಿ ಹೊರಬಂದ ನಂತರ, ಅವರಿಗರಿವಿಲ್ಲದೆಯೇ ಉ. ಕಾ. ಕಮಿಶನರ್‌ರಿಂದ 'ಸಂಧಾನ ವಿಫಲವಾದ ವರದಿ' (ಫೆಯಿಲ್ಯೂರ್ ರಿಪೋರ್ಟ್) ಸರ್ಕಾರಕ್ಕೆ ಹೋಗಿ, ಅಲ್ಲಿ ವಿವಿಧ ಇಲಾಖೆಗಳನ್ನು ದಾಟಿ, ಈ ವಿವಾದವನ್ನು ಸರ್ಕಾರದ ವತಿಯಿಂದ ಕಾರ್ಮಿಕ ನ್ಯಾಯಾಲಯಕ್ಕೆ ಒಪ್ಪಿಸಿದ ಆದೇಶ ಜಾರಿಯಾಗಿದೆ. (ಕಾನೂನಿನಂತೆ ಎರಡೂ ಪಕ್ಷಗಳಿಗೆ ತಿಳಿಸದೆ 'ವಿಫಲತೆಯ ವರದಿ' ಕೊಡುವಂತಿಲ್ಲವಂತೆ.)

ಹೀಗೆ ವಿವಾದವೊಂದು ಕಾರ್ಮಿಕ ನ್ಯಾಯಾಲಯಕ್ಕೆ ವಹಿಸಲ್ಪಡಬೇಕಾದರೆ ಸಾಮಾನ್ಯ ಸಂದರ್ಭಗಳಲ್ಲಿ ಕಡೇ ಪಕ್ಷ ಏಳೆಂಟು ತಿಂಗಳು ತೆಗೆದುಕೊಳ್ಳುವುದಂತೆ. ಆದರೆ ಇಲ್ಲಿ ಮಾಲೀಕರು ಕೇವಲ ಮೂರ್ನಾಲ್ಕು ದಿನದೊಳಗೆ ಇದನ್ನು ಸಾಧಿಸಿದ್ದಾರೆ !

ಹೀಗೆ, ಈ ಪ್ರಕರಣವನ್ನು ನ್ಯಾಯಾಲಯಕ್ಕೆ ಒಪ್ಪಿಸಿರುವುದರಿಂದ ಮುಷ್ಕರ ಕಾನೂನು ಬಾಹಿರವೆಂದು ಎಷ್ಟಿಯವರಿಗೆ ತಿಳಿಸಿದ ಮಾಲೀಕ ವರ್ಗ, ಕಾರ್ಮಿಕರು ಮುಷ್ಕರ ನಡೆಸಿದರೆ ಅವರ ಮೇಲೆ ಕ್ರಮ ಕೈಗೊಳ್ಳಲು (ಬಂಧಿಸುವುದು?) ಒತ್ತಾಯಿಸಿತ್ತು ಎನ್ನಲಾಗಿದೆ. (4ನೇ ಪುಟಕ್ಕೆ)

ಸರ್ಕಾರಿ ವಾಹನ ಚಾಲಕರ ಆತ್ಮ ಗೌರವದ ಮೊರೆ

ಶೃಂಗೇರಿ: ಸರ್ಕಾರಿ ವಾಹನಗಳ ಚಾಲಕರನ್ನು 1975ರಲ್ಲೇ "ಸಿ" ಗ್ರೂಪ್ (3ನೇ ಶ್ರೇಣಿ) ನೌಕರರೆಂದು ಘೋಷಿಸಿ ಸರ್ಕಾರ ಆದೇಶ ಹೊರಡಿಸಿದ್ದರೂ (ಆದೇಶ ಸಂಖ್ಯೆ 1499/ಎಸ್‌ಆರ್‌ಬಿ.75 ದಿನಾಂಕ 20-9-75) ಹಲವು ಇಲಾಖೆಗಳಲ್ಲಿ ಮೇಲಧಿಕಾರಿಗಳು ಈ ನೌಕರರನ್ನು "ಡಿ" ಗ್ರೂಪ್ ನೌಕರರಂತೆ ನಡೆಸಿಕೊಳ್ಳುತ್ತಿರುವುದಕ್ಕೆ ಜಿಲ್ಲಾ ಸರ್ಕಾರಿ ವಾಹನ ಚಾಲಕರ ಸಂಘ ತನ್ನ ತೀವ್ರ ಆಕ್ಷೇಪವನ್ನು ವ್ಯಕ್ತಪಡಿಸಿದೆ.

ಇನ್ನಾದರೂ ಇವರನ್ನು ಬೇರೆಲ್ಲ 'ಸಿ' ಗ್ರೂಪ್ ನೌಕರರಂತೆಯೇ ಗೌರವ, ಮನ್ನಣೆಗಳೊಂದಿಗೆ ನಡೆಸಿಕೊಳ್ಳುವಂತೆ ಸಂಘದ ಸಂಚಾಲಕ ಎಂ.ಎಸ್. ಬಾಲಕೃಷ್ಣ ಒತ್ತಾಯಿಸಿದ್ದಾರೆ.

ಉಚಿತ ಕ್ರೀಡಾ ತರಬೇತಿ

ಚಿಕ್ಕಮಗಳೂರು: ಜಿಲ್ಲೆಯಲ್ಲಿರುವ ಕ್ರೀಡಾ ಪಟುಗಳಿಗೆ ಹಾಗೂ ಕ್ರೀಡೆಯಲ್ಲಿ ಆಸಕ್ತಿ ಇರುವ ಯುವಜನರಿಗೆ ಪ್ರೋತ್ಸಾಹ ನೀಡುವ ದೃಷ್ಟಿಯಿಂದ ಇಲ್ಲಿನ ನೆಹರೂ ಯುವ ಕೇಂದ್ರವು ವಾಲಿಬಾಲ್, ಖೋ-ಖೋ ಮತ್ತು ಕಬ್ಬಡಿಯಲ್ಲಿ ಉಚಿತ ಕ್ರೀಡಾ ತರಬೇತಿಗಳನ್ನು ಏರ್ಪಡಿಸುವುದು ಆಸಕ್ತಿಯುಳ್ಳ ಸಂಘ-ಸಂಸ್ಥೆಗಳು. ಶಾಲಾ ಕಾಲೇಜು ಮುಖ್ಯಸ್ಥರು ಈ ಕಾರ್ಯಾಲಯಕ್ಕೆ ಲಿಖಿತ ಮೂಲಕ ತಿಳಿಸಿದಲ್ಲಿ ಕ್ರೀಡಾ ತರಬೇತಿದಾರರನ್ನು ಕಳುಹಿಸಿ ಕೊಟ್ಟು ಪ್ರೋತ್ಸಾಹಿಸಲಾಗುವುದೆಂದು ಪ್ರಕಟಣೆಯೊಂದರಲ್ಲಿ ತಿಳಿಸಲಾಗಿದೆ.

"ಸಾರ್ವಜನಿಕ ಸಾರಿಗೆಯ ಮೋಟರ್ ವಾಹನಗಳಲ್ಲಿ ಹೊಗೆ ಬತ್ತಿ ಸೇದುವುದರ ವಿರುದ್ಧ ಈಗಾಗಲೇ ಇರುವ ಶಾಸನಬದ್ಧವಾದ ನಿಯಮಗಳನ್ನು ನಿರ್ದಾಕ್ಷಿಣ್ಯವಾಗಿ ಜಾರಿಗೆ ತರಲೇಬೇಕು" — ಎನ್ನುವ ಏಕಮಾತ್ರ ವಾಕ್ಯವನ್ನು ಕೆ.ಎಸ್.ಆರ್.ಟಿ.ಸಿ. ಬಸ್‌ಗಳ ಹಾಗೂ ಖಾಸಗಿ ರಂಗದ ಬಸ್‌ಗಳ ಗ್ರಾಹಕರು ಶತ ಸಂಖ್ಯೆಯಲ್ಲಿ ಆಯಾ ಜಿಲ್ಲೆಯ ಪೋಲೀಸ್ ಮುಖ್ಯಾಧಿಕಾರಿಗಳಿಗೂ ವಿವಿಧ ಆರ್.ಟಿ.ಒ. ಗಳಿಗೂ ಬರೆಯಬೇಕೆಂದು ಉಡುಪಿಯ ಬಳಕೆದಾರರ ವೇದಿಕೆ ಮನವಿ ಮಾಡಿದೆ.

ಸಿಂಹರಾಜಪುರ ತಾಲ್ಲೂಕಿನ ಮಂಡಲ ಪ್ರಧಾನರು - 6

ಬನ್ನೂರು ಮಂಡಲ

ತಾಲ್ಲೂಕಿನ ಮೂಲೆಯಲ್ಲೊಬ್ಬ ಕಿರಿಸ್ತಾನ್ ಪ್ರಧಾನ : ಮಂಡಲವುಳಿಸಿ ಮಲೆನಾಡನ್ನೂ ಉಳಿಸಬೇಕಾದ ಜನತೆ

ಮೂವತ್ತಮೂರು ವರ್ಷದ ಯುವಕ ...ಡ್ರಿಕ್ ಡಿ' ಕುನ್ಹ ಬಾಳೆಹೊನ್ನೂರು ...ೂಪದ ಬನ್ನೂರು ಗ್ರಾಮದ ಜಕ್ಕಣಿಕೆ ...ಮಥಾಯಿಸ್ ಡಿ' ಕುನ್ಹರ ಮಗ. ವಿ...ದ್ಯಾಭ್ಯಾಸ ಮಧ್ಯಮವಾಗಿದ್ದರೂ ಚುರುಕು ...ಡುಗ. 'ಕಲಾರಂಗ'ದ (ಬಾಳೆಹೊನ್ನೂ...ರು) ಪೋಷಕನೂ ಹೌದೆಂದು ಹೆಮ್ಮೆ ಪ...ಟ್ಟುಕೊಳ್ಳುವ ಇವರು ಸ್ವತಃ ಕಲಾವಿದರಲ್ಲ ...ದ್ದರೂ ಕಲಾಸಕ್ತರೆನ್ನುವುದಂತೂ ದಿಟ. ...ಾನು ಪೂರ್ತಿ ವಿದ್ಯಾವಂತನಾಗದಿದ್ದರೂ ...ಂಡಲದ ವಿದ್ಯಾ ಪ್ರಗತಿಗೆ ಪ್ರಾಧಾನ್ಯ ...ೊಡುತ್ತೇನೆ" ಎನ್ನುವುದು ಸಂತಸ ಪಡು...ಂಥಾದ್ದು. ಇವರ ಕಾರ್ಯ ಪ್ರವೃತ್ತಿ ...ಂಡಲದಲ್ಲಿ ಉತ್ತಮಗೊಳ್ಳಲಿ ಎಂದು ...ಭ ಕೋರುತ್ತಾ.......

ಚಿಕ್ಕವಯಸ್ಸಿನಲ್ಲಿ ಬಂದುಹೋದ ಸಾ...ುಕೆಮ್ಮನ್ನು ಜ್ಞಾಪಿಸಿಕೊಳ್ಳುವವರಂತೆ ...ಂದೆ ಕಾಂಗ್ರೆಸ್‌ನಲ್ಲಿದ್ದುದನ್ನು ನೆನಪಿಸಿ...ಳ್ಳುವ ಇವರು ಈಗ ಜನತಾ ಪಕ್ಷದ ...ಧಾನರಾಗಿ ಆಯ್ಕೆಗೊಂಡದ್ದು ಆಕಸ್ಮಿಕ ...ನ್ನುವುದಕ್ಕಿಂತ ಅನಿವಾರ್ಯ ಎನ್ನುವುದು ...ಚಿತ್ತ ಸೂಕ್ತ. ಏಕೆಂದರೆ ಎಲ್ಲರೂ ನಾವೇ ...ದ್ದರೆ ಮುಂದೆ ಬೇಕಾಗಬಹುದಾದಾಗ ಕಿರಿಸ್ತಾನ್ ಒಬ್ಬರೂ ಇಲ್ಲದಿದ್ದರೆ ಹೇಗೆ? ಈ ಮೂಲೆಯಾದರೂ ಈ ಕಿರಿಸ್ತಾನರಿಗಿರಲಿ ಎಂಬಂತೆ ಜನತಾ (ತೆ) ಈ ಫ್ರೆಡ್ರಿಕ್ ಡಿ'. ಕುನ್ಹರಿಗೆ ಪ್ರಧಾನ ಪಟ್ಟದ ಗುನ್ನ ಹಾಕಿದ್ದು ಕಿರಿಸ್ತಾನರಿಗೆ "ಜೈ" ಎಂದಂತಾಯಿತಲ್ಲವೆ!

ಎಲ್ಲಾ ಮಂಡಲಗಳಂತೆ ಈ ಮಂಡಲಕ್ಕೂ ನೀರು, ವಿದ್ಯುತ್, ರಸ್ತೆ ಮತ್ತು ನಿವೇಶನ–ಮನೆಗಳು ಅವಶ್ಯಕ. ಈ ಎಲ್ಲ ಅವಶ್ಯಕತೆಗಳನ್ನೂ ಸೂಕ್ತ ಬಗೆಹರಿಸುತ್ತೇನೆನ್ನುವ ಈ ಪ್ರಧಾನರು ಬಹು ತುರ್ತಾಗಿ ಗಮನ ಕೊಡಬೇಕಾದ ಪ್ರಮುಖ ವಿಚಾರ ಒಂದಿದೆ: ಇಂದಿನ ಜನತಾ ಸರ್ಕಾರದ ಹಂಬಲ–ಬಯಲು ನಾಡಿನವರ ಬೆಂಬಲ ಈ ಎರಡೂ ಒಂದಾಗಿ ಇದೇ ಮಂಡಲದ ಮಾಗುಂಡಿಯಲ್ಲಿ "ಭದ್ರಾ ಮೇಲ್ದಂಡೆ" ಯೋಜನೆಗೆ ಪ್ರಯತ್ನಿಸುತ್ತಿರುವುದು ಮಲೆನಾಡನ್ನೂ ಬಯಲ್ನಾಡಿನಂತೆ ಮಾಡುವ ಒಂದು ಕೆಟ್ಟ ಯೋಜನೆ. ಈ ಪ್ರಧಾನರು ಈ ಮಂಡಲದ ಜನತೆಯನ್ನು ಮಲೆನಾಡಿನ ಉಳಿವಾಗಿ ಹುರಿದುಂಬಿಸಿ, ಈ ಮಂಡಲದ ಪ್ರತಿ ಮನೆಯಲ್ಲೂ ಉಗ್ರಪ್ರತಿಭಟನೆ ಪ್ರತಿ ಬಿಂಬಿಸಿದ್ದೇ ಆದರೆ ಅಪ್ರತಿಮ ಹೋರಾಟಗಾರರ ಸಾಲಿಗೆ ಈ ಪ್ರಧಾನರು ಮತ್ತು ಜನತೆ ದಾಖಲಾಗುವುದು ಖಡಾ ಖಂಡಿತ.

ಅದಲ್ಲದೆ "ನಮಗೇನು?" ಎಂಬಂತೆ ಸುಮ್ಮನಾಗಿ ಅಣೆಕಟ್ಟೆಗೆ ಅವಕಾಶ ನೀಡಿದರೆ, ಈ ಮಂಡಲ ದ್ವೀಪದಲ್ಲಿ ದ್ವೀಪವಾಗಿ (ನರಸಿಂಹರಾಜಪುರವೂ ಈಗ ಒಂದು ದ್ವೀಪ ಇದ್ದಂತೆ) ನಾಗರಿಕ ಸೌಲಭ್ಯದಿಂದ ವಂಚಿತರಾಗಿ, ಅರಣ್ಯನಾಶದಿಂದ ಈ ಮಂಡಲ ನರಕ ಸದೃಶವಾಗುವುದರಲ್ಲಿ ಕಿಂಚಿತ್ತೂ ಅನುಮಾನವಿಲ್ಲ.

ಈ ಪ್ರಧಾನರ ಜೊತೆಗೂಡಿ ಈ ಮಂಡಲದ ಜನತೆ ಇಂಥ ಹೋರಾಟಕ್ಕಿಳಿದರೆ ಈ ಮಂಡಲದ ಉಳಿವು ಮಾತ್ರವಲ್ಲ, ಮಲೆನಾಡಿನ ಉಳಿವಿಗೇ ಹೋರಾಡಿದಂತಾಗುತ್ತದೆ; ಅವರಿಗೆ ಮಂಡಲವುಳಿಯಿತು, ಮಲೆನಾಡಿಗರಿಗೆ ಮಲೆನಾಡು ಉಳಿಯಿತು ಎಂಬಂತಾಗುತ್ತದೆ. ಇದರಿಂದ ಮಲೆನಾಡಿಗರು ಈ ಮಂಡಲಕ್ಕೆ ಚಿರಋಣಿಯಾಗುವರು. ಈ ವಿಚಾರದಲ್ಲಿ ಈ ಮಂಡಲದ ಪ್ರಧಾನರ ಮತ್ತು ಜನತೆಯ ಮನಸ್ಸು ಅಚಲವಾಗಲಿ ಎಂದು ಹಾರೈಸುತ್ತಾ ಮಂಡಲದ ಎಲ್ಲಾ ಪ್ರಗತಿ ಕಾರ್ಯಗಳಿಗೂ ಶುಭಕೋರುತ್ತೇನೆ.

—ಎಂ. ಐ. ಶ್ರೀನಿವಾಸ ಮೂರ್ತಿ
ಮೂಡುಬಾಗಲು

ಪದ್ಯದಂಕಣ

ಕಪ್ಪು ಮನ

ಮನದ ಕುಸಿತ
ಮೇಲೇಳದ ಹಾಗೆ
ಮುನ್ನುಗ್ಗದ ಹಾಗೆ
ಆಸೆಗಳ ಬೆನ್ನೇರಿ ಹಾರಾಡದ ಹಾಗೆ
ಆಕಾಶದೆತ್ತರಕೆ ಬೆಳಕ ಚಿಮ್ಮಿಸಿ
ಸಿಡಿಯದ ಹಾಗೆ
ಎಲ್ಲವೂ ಕುಡಿ ಚಿವುಟಿಸಿಕೊಂಡ
ಬರಡು ನೆಲದ ಸಸಿಯು
—ನಗಲೆತ್ನಿಸಿದ ಹಾಗೆ.
ನಗುವ ಕಸಿದ ಬಾಳು ಕೊನೆಗೊಮ್ಮೆ ಗೀಳು
ಕತ್ತಲಲಿ ಹೆಪ್ಪಾಗಿ ಮಾನವ ಮುಚ್ಚಿದ
ರಕ್ತ ಕಲೆಗಳು
ಓಡಲೆತ್ನಿಸಿ ಹಿಮ್ಮಡಿ ನರ ಕಡಿಸಿಕೊಂಡ
ಹೆಳವನ ಹೋರಾಟದ ಚಿನ್ಹೆಗಳು
ಮುಂದೊಮ್ಮೆ ಸ್ವಾಭಿಮಾನದಿ ಸಿಡಿದು
ಮಾನವೀಯತೆ ಮೆರೆಸಲು ಸಿದ್ಧವಾದ
ಕ್ರಾಂತಿ ಕಿಡಿಗಳು

—'ಸಬರ'
ಚಿಕ್ಕಮಗಳೂರು

ಗಾಂಧಿ

ಮಹಾತ್ಮ! ನಿನ್ನ ಪ್ರತಿಮೆಯ
ಹಿಂದೆಯೇ ಪ್ರೇಮ ಸಲ್ಲಾಪ,
ಕಳ್ಳತನ; ಮೋಸದ, ಸಂಚಿನ ಯೋಜನೆ;
ಮೋಜಿನ ವ್ಯವಸ್ಥೆಯ ಚಿಂತನೆ.
ನೀ ಬೋಧಿಸಿದೆ ಅಹಿಂಸೆಯ ತತ್ವ
ಬಾಳಿನಲಿ ನಡೆದು ತೋರಿದೆ
ಸತ್ಯ, ಸತ್ಯಾಗ್ರಹದ ಅರ್ಥ
ಪಡೆದಿವೆ ಈಗೆಲ್ಲವೂ ವ್ಯಂಗ್ಯಾರ್ಥ
ಹೇಗೆ ಸಹಿಸುವೆಯಯ್ಯ
ನೀ ಶಿಲೆಯಾಗಿ ನಿಂತು?

—ಡ. ರಾಜಣ್ಣ
ಶೃಂಗೇರಿ

ಓದುಗರ ಪ್ರತಿಕ್ರಿಯೆಗಳು

24. ಸಂದರ್ಶನ ಕಣ್ತೆರೆಸುವಂತಹುದು

...ಗೆಳೆಯ ನಾಗರಾಜ್,

ಹರಿಹರಪುರ ಮಠಾಧೀಶರೊಂದಿಗೆ ನೀವು ನಡೆಸಿದ ಮಾತುಕತೆಯ ಸಂದರ್ಶನ ರೂಪದ ವರದಿ ಹಲವಾರು ದೃಷ್ಟಿಗಳಿಂದ ನಮ್ಮ ಕಣ್ತೆರೆಸುವಂತಹದು. ಹಿಂದಿನಿಂದಲೂ ಸಾಂಸ್ಕೃತಿಕ ಗೋಸುಂಬೆತನಕ್ಕೆ ಹೆಸರಾದ ಈ ಸಂಸ್ಕೃತಿ ಈಗಲೂ ಅದರ ಮುಂದುವರಿಕೆಯ ಹೊಸ ಮಾರ್ಗಗಳನ್ನು ಹುಡುಕುತ್ತಿದೆ ಎನ್ನುವುದು ನಿರ್ವಿವಾದ.

ನಿಮ್ಮ ಸಂದರ್ಶನ ಕನ್ನಾಟಕದ ವಿಚಾರವಂತರೆಲ್ಲರಿಗೂ ಓದಲು ದೊರಕುವಂತಾಗಬೇಕು ಎನ್ನುವುದು ನನ್ನ ಅಭಿಪ್ರಾಯ. ನಿಮ್ಮ ಈ ಧೀಮಂತಿಕೆಗೆ ನಮ್ಮೆಲ್ಲರ ನೈತಿಕ ಬೆಂಬಲವಿದೆ.

—ಬಿ. ಗಂಗಾಧರ ಮೂರ್ತಿ,
ಗೌರಿಬಿದನೂರು.

25. ಮಠದಲ್ಲೇ ಕೋರ್ಟ್ ಕಲಾಪವೆ !?

ಪ್ರಿಯ ಸಂಪಾದಕರೆ,

ತಮ್ಮ ಪತ್ರಿಕೆಯಲ್ಲಿ 21–6–87 ಹಾಗೂ 5–7–87ರಲ್ಲಿ ಪ್ರಕಟವಾದ ಕಾವಳಿ ಲಕ್ಷ್ಮೀನಾರಾಯಣಪ್ಪನವರ ಪತ್ರಗಳನ್ನು ಒಟ್ಟಿಗೆ ಓದಿದೆ.

ಇವರ ಮೊದಲ ಪತ್ರದಲ್ಲಿ ಇವರು ಬರೆದಿದ್ದಾರೆ: "ನಿಮಗೆ ತೊಂದರೆ, ಅನ್ಯಾಯ ಆಗಿದ್ದರೆ ನ್ಯಾಯಾಲಯಕ್ಕೆ ಮೊರೆ ಹೋಗಿರಿ" ಎಂದು. ಎರಡನೆಯದರಲ್ಲಿ "ನೀವುಗಳು ನಮ್ಮ ಸ್ವಾಮೀಜಿಯನ್ನು ಕೋರ್ಟಿಗೆ ಎಳೆದರೆ ಆ ಸಮಯದಲ್ಲಿ ನಾವು ಮಠದಲ್ಲೇ ಕಲಾಪ ನಡೆಸುವಂತೆ ಕೋರ್ಟಿಗೆ ಮನವಿ ಮಾಡುತ್ತೇವೆ" ಎಂಬಂತೆ ಬರೆದಿದ್ದಾರೆ.

ಅಂದರೆ, ಸ್ವಾಮೀಜಿಯನ್ನು 'ಕೋರ್ಟಿಗೆ ಎಳೆಯುವಂತೆ' ದಾರಿ ತೋರಿಸಿ ಕೊಟ್ಟವರು ಅವರೇ ಎಂದು ಅವರ ಮೊದಲ ಪತ್ರದಿಂದಲೇ ತಿಳಿಯುತ್ತದೆ. ಈ ಅಂತರ್ಜಾತಿ ಮದುವೆಯ ಬಗ್ಗೆ ಹಗರಣ ಎಬ್ಬಿಸಿದವರು ಹರಿಹರಪುರ ಮಠದ ಶಿಷ್ಯ ಮಂಡಳಿಯ ಕೆಲವು ಮುಖಂಡರೆಂದು ಬರೆದುದಕ್ಕೆ ತಮ್ಮ ಹೆಗಲು ಮುಟ್ಟಿ ನೋಡಿಕೊಂಡಿರುವ ಇವರು ತಮ್ಮ ಗುರುವಿಗೆ ತಮ್ಮ ಮೊದಲ ಪತ್ರ ಓದಿ ಬೇಸರವಾಗುವುದೆಂದೋ ಏನೋ ಮತ್ತೊಂದು ಪತ್ರಬರೆದು ಅವರನ್ನು ಸಮಾಧಾನಪಡಿಸಲೆತ್ನಿಸಿದಂತೆ ಕಾಣುತ್ತದೆ.

ಆದರೆ, ಅವರ ಉದ್ದೇಶವೇನೇ ಇರಲಿ, ಇವರಿಗೆ ಕೋರ್ಟ್ ಕಲಾಪವನ್ನು ಮಠದಲ್ಲಿ ನಡೆಸಲು ಸ್ವಾಮೀಜಿ ಒಪ್ಪಿಗೆ ಕೊಡುವರೆ? ಎಂಬುದು ನನ್ನ ಪ್ರಶ್ನೆ.

ಏಕೆಂದರೆ, ನಾನು ಇದೇ ಮಠದ ಆಡಳಿತಕ್ಕೆ ಒಳಪಟ್ಟ ಕಾಲೇಜೊಂದರಲ್ಲಿ ವಿದ್ಯಾರ್ಥಿಯಾಗಿದ್ದಾಗ ನನ್ನ ಮೇಲೆ ವಿನಾಕಾರಣ ಅನೇಕ ಆರೋಪಗಳನ್ನು ಹೊರಿಸಲಾಗಿತ್ತು. ನಾನು ನ್ಯಾಯಕ್ಕಾಗಿ ಆಡಳಿತ ವರ್ಗವನ್ನು ಕೇಳಿಕೊಂಡಾಗ, "ನೀನು ಅಪರಾಧಿ ಹೌದೋ ಅಲ್ಲವೋ ಎಂದು ವಿಚಾರಣೆ ನಡೆಸಲು ಕಾಲೇಜ್ ಆಗಲೀ ಮಠವಾಗಲೀ ಕೋರ್ಟ್ ಅಲ್ಲ" ಎಂದು ನನಗೆ ಉತ್ತರ ನೀಡಲಾಗಿತ್ತು.

ಹೀಗಿರುವಾಗ, ಈಗ ಮಾತ್ರ ಕೋರ್ಟ್‌ನಲ್ಲಿ ನಡೆಯಬೇಕಾದ ಕಲಾಪವನ್ನು ಮಠದಲ್ಲಿ ನಡೆಸಲು ಅಸ್ಪದವಿದೆಯೆ?

—ಪ್ರಖ್ಯಾತ್ ಶೆಟ್ಟಿ,
ಹರಿಹರಪುರ

26. ಪರಿವರ್ತನೆ ಅವಶ್ಯಕ

ಪ್ರಿಯ ಸಂಪಾದಕರೆ,

ಜಾತಿ ಪದ್ಧತಿಗೆ ಕಟ್ಟುಬಿದ್ದು ಇಂದಿನ ಸಮಾಜ ತತ್ತರಿಸುತ್ತಿರುವ ಈ ಸಂದರ್ಭದಲ್ಲಿ, ನಿಮ್ಮ ನೇತೃತ್ವದಲ್ಲಿ ಜರುಗಿದ್ದ ಮದುವೆ ವಿದ್ಯಾವಂತ ಯುವಜನಾಂಗಕ್ಕೆ ಅನುಕರಣೀಯ ಮತ್ತು ಶ್ಲಾಘನೀಯ ಕೂಡ.

ಹರಿಹರಪುರ ಶ್ರೀಗಳ ಸಾರ್ವಜನಿಕ ಭಾಷಣಗಳನ್ನು ಕೇಳಿದಾಗ, ತಮ್ಮೊಡನೆ ನಡೆದ ಸಂದರ್ಶನದಲ್ಲಿ ಆಡಿದ ದ್ವಂದ್ವಾರ್ಥದ (ಅದ್ವೈತದವರಲ್ಲಿ ದ್ವೈತದವರ ನಡವಳಿಕೆ) ಮಾತುಗಳನ್ನು ಗಮನಿಸಿದಾಗ, ವೇದಾಧ್ಯಯನ ಶಿಬಿರ, ಶಿಕ್ಷಣಗಳಿಗೆ ಅವರು ನೀಡುತ್ತಾ ಬಂದಿರುವ ಮಹತ್ವ ನೋಡಿದಾಗ,

(3ನೇ ಪುಟಕ್ಕೆ)

27. ಈ ಅಸಹ್ಯ ಕಟ್ಟುಪಾಡುಗಳು....!

ಮಾನ್ಯರೆ,

ಹೆತ್ತ ತಂದೆ–ತಾಯಿಗಳಿಗೆ, ಹಿರಿಯರಿಗೆ ಹಿಂದಿನಿಂದ ರೂಢಿಸಿಕೊಂಡು ಬಂದಿರುವ ಸಂಪ್ರದಾಯ, ನೀತಿ–ನಿಯಮಗಳನ್ನು ಒಮ್ಮೆಲೇ ಬಿಟ್ಟು ಬಿಡಲು ಮನಸ್ಸು ಹಿಂಜರಿಯುತ್ತದೆ. ಅವರೆಷ್ಟೇ ವೈಚಾರಿಕವಾಗಿದ್ದರೂ ತಮ್ಮದೇ ಮನೆಯಲ್ಲಿ ಸಮಾಜದ ಮೇಲ್ಜಾತಿ - ಕೀಳ್ಜಾತಿಯೆನಿಸಿಕೊಂಡುದರ ಸಂಬಂಧಕ್ಕೆ ಅವರ ಆತ್ಮ ಸುತರಾಂ ಒಪ್ಪಲಾರದು. ಇಂತಹುದರಲ್ಲಿ ವೃದ್ಧರಾದ ನಿಮ್ಮ ತಂದೆ–ತಾಯಿಗಳ ಒಪ್ಪಿಗೆ ಅತ್ಯಂತ ಪ್ರಶಂಸನೀಯ.

ಬ್ರಾಹ್ಮಣ ಸಮಾಜದ ಮುಖಂಡರ ಬಹಿಷ್ಕಾರ, ಪ್ರಾಯಶ್ಚಿತ್ತ, ಶುದ್ಧೀಕರಣ, ಪಂಚಗವ್ಯ ಇವೆಲ್ಲದರಿಂದ ಪುನಃ ಜಾತಿಗೆ ಸೇರಿಸಿಕೊಳ್ಳುವಿಕೆ—ಛಿ! ಎಂಥ ಹೇಸಿಗೆಯ

(3ನೇ ಪುಟಕ್ಕೆ)

ಅಸಹ್ಯ ಕಟ್ಟುಪಾಡುಗಳು

(2ನೇ ಪುಟದಿಂದ)

ಕೃತ್ಯ? ಇದಕ್ಕೆ ಅರ್ಥವಿದೆಯೇ? ಆ ಇಳಿ ವಯಸ್ಸಿನ ತಂದೆ–ತಾಯಿಗಳ ಮನಸ್ಸಿನ ಮೇಲೆ ಎಂತಹ ಸವಾರಿ ಇವರದು? 'ಒಳಗೆ ಹುಳುಕು, ಮೇಲೆ ಥಳುಕು' —ಇಂತಹವರಿಗಾಗಿಯೇ ಹುಟ್ಟಿದ ಗಾದೆ ಮಾತು ಇರಬೇಕಲ್ಲವೆ?

ನಿಮ್ಮಗಳ ಈ ಕಾರ್ಯ ಸಮಾಜದ ಕಣ್ಣನ್ನೊಮ್ಮೆ ವೈಚಾರಿಕತೆಯ ಕಡೆಗೆ, ಹುರುಳಿಲ್ಲದ ಜಾತೀಯತೆಯ ಕೆಸರಿನ ಕಡೆಗೆ ತೀವ್ರವಾಗಿ ಹೊರಳಿಸುವಂತೆ ಮಾಡಿದೆ.

—'ಸುಸವಾ'
ಹೊಸಕೊಪ್ಪ

ಗ್ರಾಮಸ್ಥರ ದೂರು ಅಧಿಕಾರಿಗಳಿಂದ ತನಿಖೆ :

ಒತ್ತುವರಿ, ಅರಣ್ಯ ನಾಶದ ಆರೋಪ

ಜಯಪುರ: ಇಲ್ಲಿಗೆ ಸಮೀಪದ ಎಲೆಮಡಲು ಗ್ರಾಮದಲ್ಲಿ ವ್ಯಾಪಕವಾಗಿ ಸರ್ಕಾರಿ ಕಾಡಿನ ಒತ್ತುವರಿ ಹಾಗೂ ಅರಣ್ಯ ನಾಶವಾಗಿರುವುದಾಗಿ ಗ್ರಾಮಸ್ಥರಿಂದ ದೂರೊಂದು ಬಂದಿದೆ.

ಈ ವಿಚಾರವನ್ನು ನೂತನ ಡಿ.ಎಫ್.ಓ. ಕಿಶನ್ ಸಿಂಗ್ ಸುಗಾರ ಅವರ ಗಮನಕ್ಕೆ 'ಮುಂಜಾವು' ತಂದಿದ್ದು ಇದರ ತನಿಖೆಯನ್ನು ವಲಯ ಅರಣ್ಯ ರಕ್ಷಣಾಧಿಕಾರಿಗಳಿಗೆ ಒಪ್ಪಿಸಿರುವುದಾಗಿ ಅವರು ತಿಳಿಸಿದ್ದಾರೆ.

ಒತ್ತುವರಿ ಮತ್ತು ಅರಣ್ಯ ನಾಶ ಆಗಿರುವುದು ತನಿಖೆಯಿಂದ ದೃಢಪಟ್ಟಲ್ಲಿ, ಒಂದು ವೇಳೆ ಅದು ಕಂದಾಯ ಇಲಾಖೆಗೆ ಸೇರಿದ ಭೂಮಿಯಾದರೆ ಆ ಇಲಾಖೆ ಮತ್ತು ಅರಣ್ಯ ಇಲಾಖೆ ಜಂಟಿಯಾಗಿಯೂ, ಅರಣ್ಯ ಇಲಾಖೆಗೆ ಸೇರಿದ್ದಾದರೆ ಅರಣ್ಯ ಇಲಾಖೆಯೂ ಕಾನೂನು ರೀತ್ಯಾ, ಕ್ರಮ ಕೈಗೊಳ್ಳುವುದೆಂದು ಸುಗಾರ ಭರವಸೆ ಕೊಟ್ಟಿದ್ದಾರೆ.

ವಲಯ ಅಧಿಕಾರಿಗಳ ವರದಿಯನ್ನು ಕಾಯಲಾಗುತ್ತಿದೆ.

ದೂರಿನ ಸಾರಾಂಶ

ಎಲೆಮಡಲು ಗ್ರಾಮದ ಸ! ನಂ. 6ರಲ್ಲಿ 15 ಎಕರೆ ಎಸ್ಟೇಟ್ ಹೊಂದಿರುವ ಕಂದೂರು ವೆಂಕಟೇಶ ಹೆಗ್ಡೆ ಎಂಬವರು ತಮ್ಮ ಜಮೀನಿನ ಪಕ್ಕದ ರೆವಿನ್ಯೂ ಜಾಗ ಸುಮಾರು 50 ಎಕರೆಯಷ್ಟನ್ನು ಒತ್ತುವರಿ ಮಾಡಿ ಬೇಲಿ ಹಾಕಿಕೊಂಡಿದ್ದಾರೆ. ಈಚೆಗೆ ಪುನಃ 20–25 ಎಕರೆಯಷ್ಟು ರೆವಿನ್ಯೂ ಕಾಡಿಗೆ ತುರ್ತಾಗಿ ಬೇಲಿ ಹಾಕಿ, ದುರ್ಗದ ಬೆಟ್ಟದಲ್ಲಿಯೇ ಅತ್ಯಂತ ದಟ್ಟವಾದ ಈ ಕಾಡಿನಿಂದ ಹಸಿ ಮರಗಳನ್ನು ಕಡಿಸಲಾಗುತ್ತಿದೆ. ಮರವನ್ನು ಜಯಪುರದ ಜೋಸೆಫ್ ಎಂಬವರು ಕೊಂಡಿದ್ದಾರೆಂದು ತಿಳಿದು ಬಂದಿದೆ. ಗ್ರಾಮಸ್ಥರು ಕೇಳಿದರೆ "ಹಳೇ ರಿಕಾರ್ಡ್" ಎನ್ನುತ್ತಿದ್ದಾರೆ—ಎಂಬುದಾಗಿ ಗ್ರಾಮಸ್ಥರು ದೂರಿದ್ದಾರೆ.

ಈ ಅರಣ್ಯ ಪ್ರದೇಶ ಈ ಭಾಗದ ತರಿ, ಬಾಗಾಯ್ತು ಜಮೀನುಗಳಿಗೆ ಆಧಾರವಾದ ನೀರಿನ ಮೂಲವಾಗಿದ್ದು, ಇಲ್ಲಿ ಅರಣ್ಯ ನಾಶದಿಂದ ಆ ಭೂಮಿಯೆಲ್ಲಿ ಬಂಜರಾಗುವುದಲ್ಲದೆ ತೀವ್ರವಾಗಿ ಭೂ ಕುಸಿತವು ಕೂಡ ಉಂಟಾಗಬಹುದೆಂದೂ ಭೀತಿ ವ್ಯಕ್ತಪಡಿಸಿದ್ದಾರೆ.

ಪರಿವರ್ತನೆ ಅವಶ್ಯಕ

(2ನೇ ಪುಟದಿಂದ)

ಅವರು ಅಂತರಂಗದಲ್ಲಿ ಸಾಮಾಜಿಕ ಬದಲಾವಣೆಗೆ ಕೊಟ್ಟ ಮಹತ್ವದ ಅರಿವಾಗುತ್ತದೆ. ಆದರೆ ಶಿಷ್ಯ ಮಂಡಳಿಯ ಒತ್ತಾಯಕ್ಕೆ ಮಣಿದು ಪಂಚಗವ್ಯ ಪ್ರಾಶನ, ಬಹಿಷ್ಕಾರ ಮುಂತಾದ ಅನಾಗರಿಕ ಅಸಡ್ಡಾಳತನಕ್ಕೆ ಇಳಿದಿರುವುದು ಅವರ (ಅಥವಾ ಯಾವುದೇ ಮಠಾಧಿಪತಿಯೊಬ್ಬರ) ದುರಂತ.

ಆದ್ದರಿಂದ ಅವರು ಸಂದರ್ಶನದಲ್ಲಿ ಹೇಳಿರುವಂತೆ, ಅವರೇ ಸ್ವಪ್ರೇರಣೆಯಿಂದ ಮಠಾಧಿಪತ್ಯ ಬಿಟ್ಟು, ಶಾಲೆಯ ಕೋಣೆಯಲ್ಲಿ ವಾಸಿಸುವ ಕಾಲ ಖಂಡಿತಾ ಸನ್ನಿಹಿತವಾಗಿದೆ. ಇಂದಿನ ಮಕ್ಕಳಿಗಾದರೂ ಕಾಲಕ್ಕನುಗುಣವಾಗಿ ಬದಲಾಗಬೇಕಾದ ಮಹತ್ವ, ಅಂತರ್ಜಾತೀಯ ವಿವಾಹ, ದುಡಿವ ಎಲ್ಲರ ಏಳಿಗೆ, ಅಸ್ಪೃಶ್ಯತೆ ನಿವಾರಣೆ ಮುಂತಾದವುಗಳನ್ನು ತಿಳಿಸಿ, ಹೊಸ ಯುವ ಪೀಳಿಗೆ ನಿರ್ಮಾಣಕ್ಕೆ ಕಾರಣಕರ್ತರಾಗಲಿ.

ಇವರಿಂದಲಾದರೂ ಚಿಕ್ಕಮಗಳೂರು ಜಿಲ್ಲೆಯಲ್ಲಿ ಯಾವ ಕಾಲಕ್ಕೂ ಒಂದು ಮೆದಕಿನಾಳ ಆಗದಿರಲಿ. ಎಲ್ಲರನ್ನೂ ಯಾವಾಗಲೂ ಮಾತಿನ ಮೋಡಿಯಿಂದ ಮೋಸಗೊಳಿಸಲು ಅಸಾಧ್ಯ. ಕೃತಿಗಿಳಿಯಲಿ. ಮಾನವನನ್ನು ವಿಶ್ವ ಮಾನವತೆಯತ್ತ ಒಯ್ಯಲಿ

—ಶಿವಶಂಕರ ಭಟ್ಟ, ಬಾಳೆಹೊಳೆ.

ಓದುಗರ ಪತ್ರ

ಖೋಟಾ ತಪಾಸಣೆಕಾರನ ಬಗ್ಗೆ ಎಚ್ಚರ

ಮಾನ್ಯರೆ,

ದಿನಾಂಕ 14–5–1987 ಮತ್ತು 15–7–1987ರಂದು ನರಸಿಂಹರಾಜಪುರ ತಾ|| ಬಾಳೆಹೊನ್ನೂರಿಗೆ ಸಂಬಂಧಿಸಿದ ಸರ್ಕಾರಿ ವಿವಿಧ ವೇತನಗಳ ಪ್ರಯೋಜನದಾರರಿಂದ ಯಾರೋ ನಯ ವಂಚಕನು "ನಾನು ತಾಲ್ಲೂಕು ಕಚೇರಿಯ ತಪಾಸಕನಾಗಿದ್ದು ಸರ್ಕಾರದಿಂದ ಬರುತ್ತಿರುವ ವಿಧವಾ ವೇತನ, ಅಂಗವಿಕಲ ವೇತನ, ವೃದ್ಧಾಪ್ಯ ವೇತನ ಮುಂತಾದ್ದರ ತಪಾಸಣೆ ಮಾಡಿದಾಗ ನೀವುಗಳು ಸರ್ಕಾರಕ್ಕೆ ಸುಳ್ಳು ದಾಖಲೆ ಒದಗಿಸಿ ಹಣ ಪಡೆಯುತ್ತಿದ್ದೀರಿ. ಅದನ್ನು ನಿಲ್ಲಿಸಿ ಬಿಡುತ್ತೇನೆ" ಎಂದು ಹೆದರಿಸಿ ಪ್ರಯೋಜನದಾರರಿಂದ ರೂ. 30 ರಿಂದ 50 ರವರೆಗೂ ವಸೂಲಿ ಮಾಡಿದ ಪ್ರಕರಣ ಬೆಳಕಿಗೆ ಬಂದಿದ್ದು ಸಾರ್ವಜನಿಕರಿಂದ ದೂರು ಸಹ ಬಂದಿರುತ್ತೆ.

ಈ ಬಗ್ಗೆ ತಾಲ್ಲೂಕು ಕಛೇರಿಯಿಂದಾಗಲೀ ಪ್ರಯೋಜನದಾರರನ್ನು ನೇರವಾಗಿ ಸಂಪರ್ಕಿಸಿ ಅವರನ್ನು ತಪಾಸಣೆ ಮಾಡುವ ಅಧಿಕಾರವನ್ನು ಯಾರಿಗೂ ನೀಡಿಲ್ಲ. ಆದ್ದರಿಂದ ಸಾರ್ವಜನಿಕರು ಇಂಥವರಿಂದ ಮೋಸ ಹೋಗದೆ. ಇಂಥ ಸಂದರ್ಭಗಳಲ್ಲಿ ನನ್ನನ್ನಾಗಲಿ, ಹತ್ತಿರದ ಪೋಲೀಸ್ ಅಧಿಕಾರಿಗಳನ್ನಾಗಲಿ ಖುದ್ದು ಭೇಟಿ ಮಾಡುವಂತೆ ಅಥವಾ ಸಂಪರ್ಕಿಸುವಂತೆ ವಿನಂತಿಸುತ್ತೇನೆ.

—ತಹಸೀಲ್ದಾರ್
ನ. ರಾ. ಪುರ ತಾ||

ಮತೀಯ ಅಲ್ಪ ಸಂಖ್ಯಾತರಿಗೆ ವಾಹನ ಚಾಲನೆ ತರಬೇತಿಗೆ ಅರ್ಜಿ ಆಹ್ವಾನ

ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ವತಿಯಿಂದ ಮತೀಯ ಅಲ್ಪಸಂಖ್ಯಾತರೆಂದು ಪರಿಗಣಿಸಲ್ಪಟ್ಟಿರುವ ಮುಸ್ಲಿಂ, ಕ್ರಿಶ್ಚಿಯನ್, ಜೈನ, ಬೌದ್ಧ, ಸಿಖ್, ಪಾರ್ಸಿ ಹಾಗೂ ಆಂಗ್ಲೋ ಇಂಡಿಯನ್ ವರ್ಗಕ್ಕೆ ಸೇರಿದ ವಿದ್ಯಾವಂತ ನಿರುದ್ಯೋಗಿ ಯುವಕರಿಗೆ ಆಟೋರಿಕ್ಷಾ, ಲಘುವಾಹನ ಮತ್ತು ಭಾರಿವಾಹನ ಚಾಲನೆ ತರಬೇತಿಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅರ್ಜಿದಾರರ ಕುಟುಂಬದ ಒಟ್ಟು ವಾರ್ಷಿಕ ವರಮಾನ ಎಲ್ಲಾ ಮೂಲಗಳಿಂದಲೂ ರೂ. 6000 ಕ್ಕೆ ಮೀರಿರಬಾರದು.

ಒಂದು ತಿಂಗಳ ಅವಧಿಯ ಈ ತರಬೇತಿಗೆ ಆಯ್ಕೆಯಾದ ಅಭ್ಯರ್ಥಿಗೆ ರೂ. 200 ತರಬೇತಿ ಭತ್ಯವನ್ನಾಗಿ ಕೊಡಲಾಗುವುದು. ಹಾಗೂ ಅಭ್ಯರ್ಥಿಯ ವಾಸಸ್ಥಳದಿಂದ ತರಬೇತಿ ಕೇಂದ್ರಕ್ಕೆ ಒಂದು ಬಾರಿ ಹೋಗಿ ಬರಲು ಬಸ್ಸಿನ ದರವನ್ನು ನೀಡಲಾಗುವುದು. ಈ ಕೆಳಕಂಡತೆ ವಾಹನ ಚಾಲನೆ ತರಬೇತಿ ಶುಲ್ಕವನ್ನು ತರಬೇತಿ ಶಾಲೆಯ ಪ್ರಾಂಶುಪಾಲರಿಗೆ ಕೊಡಲಾಗುವುದು.

ಅರ್ಜಿ ಫಾರಂ ಮತ್ತು ಹೆಚ್ಚಿನ ಮಾಹಿತಿಗಳನ್ನು ಜಿಲ್ಲಾ ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಪಡೆಯಬಹುದು. ಅರ್ಜಿ ಸಲ್ಲಿಸಲು ಕಡೇ ದಿನಾಂಕ 31–7–1987.

ಶಂಕರ್ ಸಾರಿಗೆ ಕಾರ್ಮಿಕರ ಮುಷ್ಕರ ಆರಂಭ

(1ನೇ ಪುಟದಿಂದ)

ಜು. 17ರ ರಾತ್ರಿ ಕಾರ್ಮಿಕ ಮುಖಂಡ ಅನಂತ ಸುಬ್ಬರಾವ್ ಎಸ್ಪಿ, ಡಿ.ಸಿ.ಗಳೊಂದಿಗೆ ಚರ್ಚಿಸುವಾಗ ಸರ್ಕಾರದ ಈ ಆದೇಶವನ್ನು ಉಲ್ಲೇಖಿಸಿ ಮುಷ್ಕರವನ್ನು ನಡೆಸದಿರುವಂತೆ ಎಸ್ಪಿ ಸೂಚಿಸಿದರೆನ್ನಲಾಗಿದೆ. **"ಆದರೆ ಸರ್ಕಾರ ಮುಷ್ಕರವನ್ನೇ ನಿಷೇಧಿಸಿ ಆಜ್ಞೆಯನ್ನೇನೂ ಹೊರಡಿಸಿಲ್ಲ. ಪ್ರಕರಣವನ್ನು ನ್ಯಾಯಾಲಯಕ್ಕೊಪ್ಪಿಸಿದಾಕ್ಷಣ ಮುಷ್ಕರ ಕಾನೂನು ಬಾಹಿರ ಎನ್ನಿಸಿಕೊಳ್ಳುವುದಿಲ್ಲ"** ಎಂದು ಅನಂತ ಸುಬ್ಬರಾವ್ ನೀಡಿದ ವಿವರಣೆಯನ್ನು, ಹಿಂದೆ ಕಾನೂನು ಸಚಿವಾಲಯದಲ್ಲಿ ಉಪಕಾರ್ಯದರ್ಶಿಯಾಗಿದ್ದ ಜಿಲ್ಲಾಧಿಕಾರಿಯವರು ಅನುಮೋದಿಸಿದಾಗ ಎಸ್ಪಿ ಅರ್ಥ ಮಾಡಿಕೊಂಡು ಕೆಲಸ ಮಾಡಬಯಸುವ ಶಂಕರ್ ಕಂಪೆನಿ ಕಾರ್ಮಿಕರಿಗೆ ರಕ್ಷಣೆ ಕೊಡುವುದಾಗಿ ತಿಳಿಸಿದರು.

ಅನಂತರ ಸುಬ್ಬರಾವ್ ಅವರು, ಮಾಲೀಕವರ್ಗ ಖೋಟಾ ಕಾರ್ಮಿಕರಿಂದ ಹಾಗೂ ಬಾಡಿಗೆ ಜನಗಳಿಂದ ಬಸ್ಸುಗಳನ್ನು ಓಡಿಸಲು ಯತ್ನಿಸಬಹುದಾದ್ದರಿಂದ, ಕಾನೂನು ಪ್ರಕಾರ, ಮುಷ್ಕರ ಆರಂಭವಾಗುವ ಮೊದಲು ಕಂಪೆನಿಯ ಸಿಬ್ಬಂದಿ ವರ್ಗಕ್ಕೆ ಸೇರಿದವರ ಹೊರತು ಬೇರೆ ಯಾರು ಬಸ್ಸುಗಳನ್ನು ಓಡಿಸಿದರೂ ಅಂಥ ಬಸ್ಸುಗಳನ್ನು ಮುಟ್ಟುಗೋಲು ಹಾಕಿಕೊಳ್ಳಬೇಕೆಂದು ಹಿರಿಯ ಅಧಿಕಾರಿಗಳಿಬ್ಬರಿಗೂ ಮನವಿ ಮಾಡಿದರು.

ಇದನ್ನೊಪ್ಪಿದ ಅಧಿಕಾರಿಗಳು ಮಾಲೀಕರಿಗೆ ಸೂಕ್ತ ಸೂಚನೆ ಕೊಟ್ಟರು. ಅದರಂತೆ ಮುಷ್ಕರದ ವೇಳೆ ತಾನು ಓಡಾಡಿಸಲಿರುವ ಬಸ್ಸುಗಳು ಹಾಗೂ ಅವುಗಳನ್ನು ನಡೆಸುವ ಸಿಬ್ಬಂದಿಯ ಪಟ್ಟಿಯನ್ನು ಕಂಪೆನಿ ಸಲ್ಲಿಸಿತು.

ಅಂದು ರಾತ್ರಿ ಕಾರ್ಮಿಕರ ಜೊತೆ ಮಾತುಕತೆ ನಡೆಸಿದ ಅನಂತ ಸುಬ್ಬರಾವ್, ಯಾವ ಕಾರಣಕ್ಕೂ ಉದ್ವಿಗ್ನಗೊಂಡು ಗಲಭೆ-ಗಲಾಟೆಗಳಿಗೆ ಅವಕಾಶ ಕೊಡಬಾರದೆಂದೂ, ಅಂಥ ಸಂದರ್ಭ ಸೃಷ್ಟಿಸಿ, ಕಾನೂನು-ಶಾಂತಿ ಹೆಸರಲ್ಲಿ ಕಾರ್ಮಿಕರನ್ನೆಲ್ಲ ಬಂಧಿಸಿ ಮುಷ್ಕರ ಮುರಿಯುವುದು ಎಲ್ಲಾ ಲುಚ್ಚ ಮಾಲೀಕ ವರ್ಗಗಳ ಕುತಂತ್ರವಾಗಿರುತ್ತದೆಂದೂ ಎಚ್ಚರಿಸಿ, ಅವರ ನ್ಯಾಯಯುತ ಹೋರಾಟ ಶಾಂತಿಯುತವಾಗಿ ನಡೆದು ಯಶಸ್ವಿಯಾಗಲೆಂದು ಹಾರೈಸಿದರು.

ಸರ್ಕಾರಿ ಬಸ್ಸುಗಳು

ಕಾರ್ಮಿಕ ಮುಷ್ಕರದ ವೇಳೆ ಸಾರ್ವಜನಿಕರಿಗೆ ತೊಂದರೆಯಾಗದಿರಲು ರಾಜ್ಯ ರಸ್ತೆ ಸಾರಿಗೆ ಸಂಸ್ಥೆ 25 ಬಸ್ಸುಗಳನ್ನೂ ಅವುಗಳ ಓಡಾಟದ ಮೇಲ್ವಿಚಾರಣೆಗೆ ಮೂವರು ಇನ್ಸ್‌ಪೆಕ್ಟರುಗಳನ್ನೂ ಒದಗಿಸಿದ್ದು, ಬಹುತೇಕ ಎಲ್ಲಾ ಮಾರ್ಗಗಳಲ್ಲಿ ಹಾಗೂ ಪ್ರಯಾಣಿಕರ ಸಂಖ್ಯೆ ಹೆಚ್ಚಿರುವ ಕಡೆಗೆಲ್ಲ ಈ ಬಸ್ಸುಗಳು ಓಡಾಡುತ್ತಿವೆ. ಯಾವುದೇ ಸಂದರ್ಭದಲ್ಲೂ ರಾಜ್ಯ ಸಾರಿಗೆ ಬಸ್ಸುಗಳನ್ನು ವ್ಯವಸ್ಥೆ ಮಾಡಲು ಸಿದ್ಧವಿರುವುದಾಗಿ ತಿಳಿಸಿರುವ ಜಿಲ್ಲಾಧಿಕಾರಿಗಳು ಸಾರ್ವಜನಿಕರಿಗೆ ಮುಷ್ಕರದಿಂದ ಆಗ ಬಹುದಾದ ಅನಾನುಕೂಲಕ್ಕಾಗಿ ವಿಷಾದ ವ್ಯಕ್ತಪಡಿಸಿದ್ದಾರೆ.

ಬಾಡಿಗೆ ಡ್ರೈವರ್‌ಗಳು

ಜು. 17 ರ ರಾತ್ರಿ ಹಿರಿಯ ಅಧಿಕಾರಿಗಳಿಗೆ ಪಟ್ಟಿ ಸಲ್ಲಿಸುವ ಮೂಲಕ ಒಪ್ಪಿಕೊಂಡಿದ್ದ ಕಾನೂನಿನ ಚೌಕಟ್ಟನ್ನು ಮುಷ್ಕರದ ಆರಂಭದ ದಿನವಾದ ಜು. 18 ರಂದು ಕಂಪೆನಿ ಮುರಿದು ಬೇರೆ ಸಂಸ್ಥೆಗಳ ಡ್ರೈವರ್‌ಗಳನ್ನು ಬಸ್ ಓಡಿಸಲು ಬಳಸಿಕೊಂಡಿದ್ದಾಗಿ ಕಾರ್ಮಿಕ ಮುಖಂಡರು ಪೋಲೀಸ್ ಅಧಿಕಾರಿಗಳಿಗೆ ದೂರು ನೀಡಿದ ಮೇರೆಗೆ ಅಂಥ ಕೆಲವನ್ನು ಪತ್ತೆ ಹಚ್ಚಿ ಕ್ರಮ ಕೈಗೊಳ್ಳಲಾಯಿತೆನ್ನಲಾಗಿದೆ. ಅಂದು ಒಟ್ಟು 22 ಬಸ್‌ಗಳು ಓಡಾಡಿದುವೆಂದು ತಿಳಿದು ಬಂದಿದೆ. (ಕಂಪೆನಿಯ ಒಟ್ಟು ಸರ್ವಿಸ್‌ಗಳ ಸಂಖ್ಯೆ 64 ಎನ್ನಲಾಗಿದೆ.)

ಅಂದು ಕೆಲಸ ಮಾಡಿದ ಹಲವು ಮಂದಿ ಕಂಪೆನಿಯ ಹಂಗಾಮಿ ಮತ್ತಿತರ ಕಾರ್ಮಿಕರನ್ನು ಮುಷ್ಕರ ನಿರತ ಕಾರ್ಮಿಕರು ಮನವೊಲಿಸಿ ಕೆಲಸಕ್ಕೆ ಹೋಗದೆ ಮುಷ್ಕರದಲ್ಲಿ ಭಾಗವಹಿಸುವಂತೆ ಮನವೊಲಿಸಿದ ಪರಿಣಾಮವಾಗಿ, ಮುಷ್ಕರದ 2ನೇ ದಿನವಾದ ಭಾನುವಾರ ಕಂಪೆನಿಯ ಕೇವಲ 4 ಬಸ್‌ಗಳು ಓಡಾಡಿದವು. ಈ ಎಲ್ಲ ಬಸ್‌ಗಳಿಗೂ ಪೋಲೀಸ್ ರಕ್ಷಣೆ ನೀಡಲಾಗಿತ್ತು.

ಮೂರ್ನಾಲ್ಕು ಕಡೆ ಸಣ್ಣಪುಟ್ಟ ಘರ್ಷಣೆ ಅಥವಾ ಕಲ್ಲು ಎಸೆದ ಘಟನೆಗಳನ್ನು ಬಿಟ್ಟರೆ ಬಹುತೇಕ ಮುಷ್ಕರ ಶಾಂತಿಯುತವಾಗಿ ನಡೆಯುತ್ತಿದ್ದು, ಭಾನುವಾರ 2ನೇ ದಿನ ಮುಗಿಸಿ ಮುಂದುವರಿಯುತ್ತಿದೆ.

ನೂತನ ಪದಾಧಿಕಾರಿಗಳು

ಕೊಪ್ಪ ಲಯನ್ಸ್ ಕ್ಲಬ್

ನೂತನ ಸಾಲಿಗೆ ಲಯನ್ಸ್ ಕ್ಲಬ್ ಅಧ್ಯಕ್ಷರಾಗಿ ಕೆ. ವಸಂತ ಅಜಿಲರೂ, ಕಾರ್ಯದರ್ಶಿಯಾಗಿ ಪಿ. ಬಿ. ವಿವೇಕ್ ಮತ್ತು ಖಜಾಂಚಿಯಾಗಿ ಜಿ. ಎಸ್. ಕೃಷ್ಣೇಗೌಡ ಅವರುಗಳೂ ಆಯ್ಕೆಯಾಗಿದ್ದಾರೆ. ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭ ಜು. 12ರಂದು ನಡೆಯಿತು.

ಕೊಪ್ಪ ರೋಟರಿ ಕ್ಲಬ್

ಜು. 15ರಂದು ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭ ಕೆ. ಎಸ್. ಶಾಂತಾರಾಂ ಅಧ್ಯಕ್ಷತೆಯಲ್ಲಿ ನಡೆಯಿತು. ಎಚ್.ಎಸ್. ಶ್ರೀನಿವಾಸ್ ಅಧ್ಯಕ್ಷರಾಗಿ, ಐ. ಎಂ. ದುಗ್ಗಪ್ಪ ಗೌಡ ಕಾರ್ಯದರ್ಶಿ ಮತ್ತು ಎಸ್. ರವೀಂದ್ರ ಪೈ ಖಜಾಂಚಿಯಾಗಿ ಆಯ್ಕೆಯಾಗಿದ್ದಾರೆ.

ಮಲೆನಾಡು ಯಕ್ಷಗಾನ ಕಲಾ ಶಿಕ್ಷಣ ಕೇಂದ್ರ

ಎಂ.ಎಲ್. ರಾಮಚಂದ್ರರಾವ್ (ಅಧ್ಯಕ್ಷರು), ಎಚ್. ಎಸ್. ಮಂಜುನಾಥ್ (ಉಪಾಧ್ಯಕ್ಷರು), ಕೆ. ಆರ್. ಭಾಸ್ಕರಾಚಾರ್ಯ (ಕಾರ್ಯದರ್ಶಿ), ಯು.ಜಿ. ಚಂದ್ರಶೇಖರ್ (ಸಹ ಕಾರ್ಯದರ್ಶಿ), ಎಚ್. ಕೆ. ಶಿವರಾಮರಾವ್ (ಖಜಾಂಚಿ), ಎಚ್. ಜಿ. ವೆಂಕಟರಮಣಯ್ಯ (ಸಂಚಾಲಕರು). ಇವರುಗಳನ್ನು ಸರ್ವಾನುಮತದಿಂದ ಆರಿಸಲಾಯಿತು.

10.7.87ರಂದು ನಡೆದ ಬಹುಮಾನ ಯೋಜನೆ ಡ್ರಾ ಫಲಿತಾಂಶ:
2737, 2494, 1056

ಕಳ್ಳತನಕ್ಕೆ ಯತ್ನ

ಗುಡ್ಡೇತೋಟ: ಇಲ್ಲಿನ ಅಂಚೆ ಕಚೇರಿ ಮತ್ತು ಪಂಚಾಯ್ತಿ ಕಟ್ಟಡಗಳಿಗೆ ಜು. 8 ರ ರಾತ್ರಿ ಕಳ್ಳರು ನುಗ್ಗಿ ಕಳವು ಮಾಡಲು ಯತ್ನಿಸಿದ್ದು, ಯಾವ ವಸ್ತುವೂ ಕಳವಾಗಿಲ್ಲವೆನ್ನಲಾಗಿದೆ.

ವಾಣಿಜ್ಯ ಪರೀಕ್ಷೆ ಫಲಿತಾಂಶ

ಜಯಪುರದ ವಾಣಿಜ್ಯ ಶಾಲೆಗೆ ಶೇ. 67 ಮತ್ತು ಬಸರಿಕಟ್ಟೆಯ ಶ್ರೀಕೃಷ್ಣ ವಾಣಿಜ್ಯ ಶಾಲೆಗೆ ಶೇ. 81 ಫಲಿತಾಂಶ ಬಂದಿದೆ.

(ವರದಿ: ಎಂ. ವಿ. ಗಂಗಾಧರ್)

ಬೀಳ್ಕೊಡಿಗೆ

ಹರಿಹರಪುರ: ತಾ॥ ಸಹಾಯಕ ಶಿಕ್ಷಣಾಧಿಕಾರಿಯಾಗಿದ್ದ ಎಚ್. ಎಂ. ಮಲ್ಲಯ್ಯನವರನ್ನು ಈ ಕೇಂದ್ರದ ಪ್ರಾಥಮಿಕ ಶಿಕ್ಷಕರು ಜು. 8ರಂದು ಎನ್. ಆರ್. ಶ್ರೀನಿವಾಸ್ ಅಧ್ಯಕ್ಷತೆಯಲ್ಲಿ ಸನ್ಮಾನಿಸಿ ಬೀಳ್ಕೊಟ್ಟರು. ಎಸ್. ವಿ. ಅಡಿಗ ಮುಖ್ಯ ಅತಿಥಿಯಾಗಿದ್ದರು. ಕೆ. ಎಸ್. ಚಂದ್ರಶೇಖರ ರಾವ್ ಸ್ವಾಗತಿಸಿದರು. ತಾ॥ ಶಿಕ್ಷಕ ಸಂಘದ ಅಧ್ಯಕ್ಷ ಕೆ.ಎಂ.ಶೇಷಣ್ಣನಾಯ್ಕ ಮಲ್ಲಯ್ಯನವರಿಗೆ ಕೇಂದ್ರದ ಶಿಕ್ಷಕರ ಪರವಾಗಿ ಶಾಲು ಹೊದಿಸಿ, ವಂದನಾರ್ಪಣೆ ಮಾಡಿದರು.

ಕೃಷಿ ಸಾಮಗ್ರಿಗಳ ವಿತರಣೆ

ಶೃಂಗೇರಿ: ಈ ತಾಲ್ಲೂಕಿನ ಮರ್ಕಲ್ ಮಂಡಲ ಪಂಚಾಯ್ತಿ ವ್ಯಾಪ್ತಿಯಲ್ಲಿನ 21 ಮಂದಿ ಗಿರಿಜನ ರೈತರಿಗೆ 11,700 ರೂ. ಬೆಲೆಯ ಕೃಷಿ ಸಾಮಗ್ರಿಗಳನ್ನು ಕೆ. ಎಂ. ಶ್ರೀನಿವಾಸ್ ಅಧ್ಯಕ್ಷತೆಯಲ್ಲಿ ಜಿಲ್ಲಾ ಪರಿ[illegible]ಸದಸ್ಯ ಕೆ. ವಿ. ರಾಮಪ್ಪಯ್ಯ ವಿತ[illegible] ಮಾಡಿದರು.

ಶಿವಮೊಗ್ಗ ಅಡಿಕೆ ಧಾರಣೆ

ತಾ॥ 18.7.1987
ಸರಕು : 4368 – 5119
ಬೆಟ್ಟೆ : 2117 – 2900
ಗೊರಬಲು: 902

ಸಾಗರ ಅಡಿಕೆ ತಾ॥ 18.7.1987

ಇಡಿ ಅಡಿಕೆ ರೂ. 1869–2099
ಚಾಲಿ ರೂ. 1146–1377
ಸಿಪ್ಪೆ ಗೋಟು ರೂ. 309–561
ಮೆಣಸು ರೂ. 5456–5546

ಮಂಗಳೂರು ಧಾರಣೆ

ದಿನಾಂಕ 16-7-87
ಏಲಕ್ಕಿ ರೂ. 132–160
ಕಾಳು ಮೆಣಸು 5648-5674

ಸಕಲೇಶಪುರ ಏಲಕ್ಕಿ ಧಾರಣೆ

7.7.87ರಿಂದ 10.7.87
ರೂ. 138.00—267.00

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ: ಸಿರಿಮನೆ ನಾಗರಾಜ್, ಅಚ್ಚು: ದೀವಟಿಗೆ ಅಚ್ಚುಕೂಟ, ಕೊಪ್ಪ

ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್

'MUNJAVU' Kannada Weekly. KOPPA - CHM. ಫೋನ್: 114

5ನೇ ವರ್ಷ 43ನೇ ಸಂಚಿಕೆ ಕೊಪ್ಪ 19–7–1987 ಭಾನುವಾರ ಬೆಲೆ 50 ಪೈಸೆ

ಸ್ವಯಂ ಉದ್ಯೋಗ ಯೋಜನೆಗೆ ಅರ್ಜಿ ಸಲ್ಲಿಸಲು ಅವಧಿ ವಿಸ್ತರಣೆ

ಕೊಪ್ಪ: ಜಿಲ್ಲಾ ಕೈಗಾರಿಕಾ ಕೇಂದ್ರದ ವತಿಯಿಂದ ಸ್ವಯಂ ಉದ್ಯೋಗ ಯೋಜನೆಗಾಗಿ ಅರ್ಜಿ ಸಲ್ಲಿಸಲು ಕೊನೇ ದಿನಾಂಕವನ್ನು 31–7–1987ರವರೆಗೆ ವಿಸ್ತರಿಸಲಾಗಿದೆ.

ಕನಿಷ್ಠ ವಿದ್ಯಾರ್ಹತೆ: ಎಸ್ಸೆಸ್ಸೆಲ್ಸಿ, ವಯೋಮಿತಿ: 18ರಿಂದ 35 ವರ್ಷ. ಕೈಗಾರಿಕೆಗೆ 35,000 ರೂ., ಸೇವಾ ಉದ್ಯಮಕ್ಕೆ 25,000 ರೂ. ಹಾಗೂ ವ್ಯಾಪಾರಕ್ಕೆ 15,000 ರೂ ಗಳವರೆಗೆ ಗರಿಷ್ಠ ಸಾಲ ದೊರೆಯುತ್ತದೆ.

ಯಾವ ಉದ್ಯಮ ಆರಂಭಿಸಬಹುದೆಂಬ ಬಗ್ಗೆ ಹಾಗೂ ಇನ್ನಿತರ ಮಾಹಿತಿಗಳನ್ನು ಆಯಾ ತಾಲ್ಲೂಕಿನ ಕೈಗಾರಿಕಾ ವಿಸ್ತರಣಾಧಿಕಾರಿಗಳಿಂದ ಪಡೆಯಬಹುದು.

ಜನ ಪ್ರತಿನಿಧಿಗಳು, ಹಿರಿಯ ಅಧಿಕಾರಿಗಳಿಂದ ಕೊನೇ ಗಳಿಗೆವರೆಗಿನ

ಸಂಧಾನ ಯತ್ನಗಳಿಗೆ ಶಂಕರ್ ಸಾರಿಗೆ ಮಾಲೀಕರ ನಿರ್ಲಕ್ಷ್ಯ ಧೋರಣೆ :

ತಪ್ಪದ ಮುಷ್ಕರ: ಬಹುತೇಕ ಶಾಂತಿಯುತ, ಯಶಸ್ವಿ

ಕೊಪ್ಪ: ಶಂಕರ್ ಸಾರಿಗೆ ಸಂಸ್ಥೆಯ ಇತಿಹಾಸದಲ್ಲಿ ಎರಡನೆಯದಾದ ಪೂರ್ಣ ಪ್ರಮಾಣದ ಕಾರ್ಮಿಕ ಮುಷ್ಕರ ಜುಲೈ 18ರಿಂದ ಆರಂಭವಾಗಿದೆ. ಎ. ಐ. ಟಿ. ಯು. ಸಿ. ನೇತೃತ್ವದ ಚಿಕ್ಕಮಗಳೂರು ಜಿಲ್ಲಾ ಟ್ರಾನ್ಸ್‌ಪೋರ್ಟ್ ಅಂಡ್ ಜನರಲ್ ಮಜ್ದೂರ್ ಸಂಘ ಈ ಮುಷ್ಕರವನ್ನು ಸಂಘಟಿಸಿದೆ.

ಜೀವನಾವಶ್ಯಕತೆಗೆ ತಕ್ಕ ವೇತನ ಮತ್ತು ತುಟ್ಟಿ ಭತ್ಯದ ಹೆಚ್ಚಳ, 'ಈಗಿನ 14–15 ಗಂಟೆಗೆ ಬದಲು' ದಿನಕ್ಕೆ 8 ಗಂಟೆ ಕೆಲಸ, ಹೆಚ್ಚಿನ ಕೆಲಸಕ್ಕೆ ಭತ್ಯ, ವೈದ್ಯಕೀಯ ಸೌಲಭ್ಯ, ಮನೆ ಬಾಡಿಗೆ, ಯೂನಿಫಾರಂ ಮತ್ತಿತರ ಭತ್ಯೆಗಳು, ಕಾರ್ಮಿಕರಿಗೆ ಸಿಗಬೇಕಾದ ಕನಿಷ್ಠ ಸೌಕರ್ಯಗಳ ನೀಡಿಕೆ, ರಜಾ ಸೌಲಭ್ಯಗಳು, ಕೆಲವು ಕಾರ್ಮಿಕರ ಮೇಲೆ ವಿನಾ ಕಾರಣ (ಯೂನಿಯನ್ ಚಟುವಟಿಕೆಗಾಗಿ) ತೆಗೆದುಕೊಂಡಿರುವ ವರ್ಗಾವಣೆ, ಅಮಾನತು ಮುಂತಾದ ಕ್ರಮಗಳನ್ನು ಕೈಬಿಡುವುದು—ಮುಂತಾದುವು ಕಾರ್ಮಿಕರ ಪ್ರಮುಖ ಬೇಡಿಕೆಗಳಾಗಿವೆ.

ವಿಫಲವಾದ ಸಂಧಾನಯತ್ನ

ಈ ಮುಷ್ಕರವನ್ನು ತಪ್ಪಿಸುವುದಕ್ಕಾಗಿ ಹಿರಿಯ ಅಧಿಕಾರಿಗಳು ಹಾಗೂ ಉನ್ನತ ಕಾರ್ಮಿಕ ನಾಯಕರುಗಳು ಕೊನೇ ಘಳಿಗೆಯವರೆಗೂ ನಡೆಸಿದ ಪ್ರಯತ್ನಗಳು ಫಲ ನೀಡಲಿಲ್ಲವೆನ್ನಲಾಗಿದೆ.

ಜು. 16 ರಂದು ಚಿಕ್ಕಮಗಳೂರಿನಲ್ಲಿ ಜಿಲ್ಲಾಧಿಕಾರಿ ಅನಿತಾ ಕೌಲ್‌ರವರನ್ನು ಭೇಟಿ ಮಾಡಿದ್ದ ಮಾಲೀಕರು, ಮುಷ್ಕರದ ಭಯದ ಅಡಿಯಲ್ಲಿ ಯಾವುದೇ ಬೇಡಿಕೆಗೆ ಒಪ್ಪಲು ತಾವು ಸಿದ್ಧರಿಲ್ಲವೆಂದೂ, ಮುಷ್ಕರವನ್ನು ಹಿಂತೆಗೆದುಕೊಂಡರೆ ಮಾತ್ರ ಬೇಡಿಕೆಗಳನ್ನು ಪರಿಶೀಲಿಸಬಹುದೆಂದೂ ತಿಳಿಸಿದ್ದರೆನ್ನಲಾಗಿದೆ.

ಎ. ಐ. ಟಿ. ಯು. ಸಿ. ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿಗಳೂ, ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ನೌಕರರ ಫೆಡರೇಶನ್ನಿನ ಉಪಾಧ್ಯಕ್ಷರೂ ಆಗಿರುವ ಎಚ್. ವಿ. ಅನಂತ ಸುಬ್ಬರಾವ್ ಅದೇ ದಿನ ಕೊಪ್ಪಕ್ಕೆ ಬರುವ ಮಾರ್ಗದಲ್ಲಿ ಜಿಲ್ಲಾಧಿಕಾರಿಗಳನ್ನು ಭೇಟಿ ಮಾಡಿದಾಗ ಮಾಲೀಕರ ಈ ಶರತ್ತನ್ನು ಅವರ ಮುಂದಿಡಲಾಯಿತು.

ಅದಕ್ಕೆ ಅನಂತ ಸುಬ್ಬರಾವ್— "ನಾವೇನೂ ಯಾವುದೇ ರೀತಿ ಬೆದರಿಕೆ ಒಡ್ಡಿಲ್ಲ. ಕಾರ್ಮಿಕರ ಈ ಬೇಡಿಕೆಗಳನ್ನು 7 ತಿಂಗಳ ಹಿಂದೆಯೇ ಮಂಡಿಸಲಾಗಿದೆ. ಈವರೆಗೂ ಈಡೇರಿಸಿಲ್ಲ. ಮಾಲೀಕರ ಗಮನ ಸೆಳೆಯಲು ಕಳೆದ ಒಂದು ತಿಂಗಳ ಕಾಲ ಕಾರ್ಮಿಕರು ಉಪವಾಸ ನಡೆಸಿದ್ದು, ಈ ಅವಧಿಯಲ್ಲಿ ಮೂರು ಬಾರಿ ಸಂಧಾನ ಸಭೆಗಳಾದರೂ ಯಾವುದೇ ಫಲ ದೊರೆಯಲಿಲ್ಲ.

ಅದರ ಬದಲು ಈಗ ಮಾಲೀಕರೇ ಅಧಿಕಾರ ಯಂತ್ರವನ್ನು ಪೂರ್ತಿ ತಮ್ಮ ಬಾಗಿಲಿಗೆ ಕರೆಸಿಕೊಂಡಿದ್ದಾರೆ. ಪೋಲೀಸರು, ರಿಸರ್ವ್ ವ್ಯಾನುಗಳು, ಉನ್ನತ ಅಧಿಕಾರಿಗಳು—ಈ ಎಲ್ಲವೂ ಮಾಲೀಕರ ರಕ್ಷಣೆಗಿರುವುದು ನೋಡಿದರೆ ಹೆದರಿಕೆಯಾಗಬಹುದಾದುದು ಕಾರ್ಮಿಕರಿಗೇ ಹೊರತು ಮಾಲೀಕರಿಗಲ್ಲ.

ಇದರ ಬದಲು ಅವರು ಅತ್ಯಂತ ಮುಖ್ಯವಾದ ಒಂದೆರಡು ಬೇಡಿಕೆಗಳ ಬಗ್ಗೆ ಕಡೇ ಪಕ್ಷ ತಾತ್ಕಾಲಿಕ ಪರಿಹಾರವನ್ನಾದರೂ ಘೋಷಿಸಲಿ, ನಾವು ಮುಷ್ಕರ ಹಿಂತೆಗೆಯುತ್ತೇವೆ. ಮತ್ತೆ ಕೂತು ಎಲ್ಲ ಬೇಡಿಕೆಗಳನ್ನೂ ಚರ್ಚಿಸಿ ಒಂದು ತಿಂಗಳೊಳಗೆ ಇತ್ಯರ್ಥಗೊಳಿಸಲಿ.

ಅದು ಬಿಟ್ಟು, ಇಷ್ಟು ದಿನ ಅರ್ಥಪೂರ್ಣ ಮಾತುಕತೆಗೇ ಅವಕಾಶ ಕೊಡದೆ ಈಗ 'ಮುಷ್ಕರ ಹಿಂತೆಗೆದರೆ ಮಾತುಕತೆ ಬಗ್ಗೆ ಪರಿಶೀಲಿಸೋಣ' ಎಂದರೆ ಅದಕ್ಕೆ ಕಾರ್ಮಿಕರು ಒಪ್ಪಲು ಸಿದ್ಧರಿಲ್ಲ. ಅವರಾಗಲೇ ಮುಷ್ಕರದ ನಿರ್ಧಾರ ಮಾಡಿಯಾಗಿದೆ. ಏನಾದರೂ ಪರಿಹಾರ ಕಾಣದೇ ಅದನ್ನು ಹಿಂತೆಗೆಯಲು ಅವರು ಒಪ್ಪುವುದಿಲ್ಲ" ಎಂದರು.

ಆಗ ಪುನಃ ಜಿಲ್ಲಾಧಿಕಾರಿಗಳು ರಮೇಶ ರಾವ್ ಅವರನ್ನು ಸಂಪರ್ಕಿಸಲು ಯತ್ನಿಸಿದರು. ಆದರೆ ಅವರು ಎಲ್ಲಿದ್ದಾರೆಂಬುದು ಗೊತ್ತಿಲ್ಲವೆಂದು ಕಂಪೆನಿಯ ಹಿರಿಯ ಅಧಿಕಾರಿಗಳು ಮಧ್ಯಾಹ್ನದವರೆಗೂ ಕಣ್ಣುಮುಚ್ಚಾಲೆಯಾಡಿದರೆನ್ನಲಾಗಿದೆ.

ಅನಂತರ ಜು. 17 ರ ಸಂಜೆ ಜಿಲ್ಲಾಧಿಕಾರಿಗಳು, ಜಿಲ್ಲಾ ಪೋಲೀಸ್ ಮುಖ್ಯಾಧಿಕಾರಿಗಳು ಕೊಪ್ಪಕ್ಕೆ ಬಂದು ಶಾಸಕರು, ಸ್ಥಳೀಯ ಜನ ಪ್ರತಿನಿಧಿಗಳು, ಕಾಂಗ್ರೆಸ್ ಮುಖಂಡರು ಮುಂತಾದವರ ಸಮ್ಮುಖದಲ್ಲಿ ಮತ್ತೊಮ್ಮೆ ಮಾತುಕತೆ ಏರ್ಪಡಿಸಲು ಶ್ರಮಿಸಿದರು. ಆದರೆ ರಾತ್ರಿ ಬಹಳ ಹೊತ್ತಿನವರೆಗೆ ಕಾದರೂ ರಮೇಶ್ ರಾವ್ 'ಪತ್ತೆ'ಯಾಗದಿದ್ದಾಗ ಎಲ್ಲರೂ ಬೇಸತ್ತು ಮುಷ್ಕರ ನಿಲ್ಲಿಸುವ ಈ ಅಂತಿಮ ಪ್ರಯತ್ನವನ್ನು ಕೈ ಬಿಟ್ಟರು.

"ಮುಷ್ಕರ ಕಾನೂನು ಬಾಹಿರವಲ್ಲ"

ಈ ಬಾರಿ ಕಾರ್ಮಿಕರು ಆರು ತಿಂಗಳಿಗೂ ಹೆಚ್ಚು ಕಾಲದಿಂದ ತಮ್ಮ ಬೇಡಿಕೆಗಳ ಈಡೇರಿಕೆಗಾಗಿ ಸಂಧಾನದ ಎಲ್ಲ ಮಾರ್ಗಗಳನ್ನೂ ಪ್ರಯತ್ನಿಸಿ ವಿಫಲರಾಗಿ ಮುಷ್ಕರದ ನಿರ್ಧಾರ ಕೈಗೊಂಡಾಗ ಕಾನೂನು ರೀತ್ಯಾ 15 ದಿನ ಮೊದಲು ಮುಷ್ಕರದ ನೋಟಿಸನ್ನು ಕಂಪೆನಿಗೆ ಜಾರಿ ಮಾಡಿದ್ದರು.

ಆದರೆ ಜು. 9ರ ಸಂಧಾನ ವಿಫಲವಾಗಿ, ಕಾರ್ಮಿಕ ಮುಖಂಡರು ಇನ್ನೊಂದು ಸುತ್ತಿನ ಮಾತುಕತೆಗೆ ದಿನ ಗೊತ್ತುಪಡಿಸಿ ತಿಳಿಸುವಂತೆ ಉಪ ಕಾರ್ಮಿಕ ಕಮಿಶನರ್‌ರಿಗೆ ತಿಳಿಸಿ ಹೊರಬಂದ ನಂತರ, ಅವರಿಗರಿವಿಲ್ಲದೆಯೇ ಉ. ಕಾ. ಕಮಿಶನರ್‌ರಿಂದ 'ಸಂಧಾನ ವಿಫಲವಾದ ವರದಿ' (ಫೆಯಿಲ್ಯೂರ್ ರಿಪೋರ್ಟ್) ಸರ್ಕಾರಕ್ಕೆ ಹೋಗಿ, ಅಲ್ಲಿ ವಿವಿಧ ಇಲಾಖೆಗಳನ್ನು ದಾಟಿ, ಈ ವಿವಾದವನ್ನು ಸರ್ಕಾರದ ವತಿಯಿಂದ ಕಾರ್ಮಿಕ ನ್ಯಾಯಾಲಯಕ್ಕೆ ಒಪ್ಪಿಸಿದ ಆದೇಶ ಜಾರಿಯಾಗಿದೆ. (ಕಾನೂನಿನಂತೆ ಎರಡೂ ಪಕ್ಷಗಳಿಗೆ ತಿಳಿಸದೆ 'ವಿಫಲತೆಯ ವರದಿ' ಕೊಡುವಂತಿಲ್ಲವಂತೆ.)

ಹೀಗೆ ವಿವಾದವೊಂದು ಕಾರ್ಮಿಕ ನ್ಯಾಯಾಲಯಕ್ಕೆ ವಹಿಸಲ್ಪಡಬೇಕಾದರೆ ಸಾಮಾನ್ಯ ಸಂದರ್ಭಗಳಲ್ಲಿ ಕಡೇ ಪಕ್ಷ ಎಳೆಂಟು ತಿಂಗಳು ತೆಗೆದುಕೊಳ್ಳುವುದಂತೆ. ಆದರೆ ಇಲ್ಲಿ ಮಾಲೀಕರು ಕೇವಲ ಮೂರ್ನಾಲ್ಕು ದಿನದೊಳಗೆ ಇದನ್ನು ಸಾಧಿಸಿದ್ದಾರೆ!

ಹೀಗೆ, ಈ ಪ್ರಕರಣವನ್ನು ನ್ಯಾಯಾಲಯಕ್ಕೆ ಒಪ್ಪಿಸಿರುವುದರಿಂದ ಮುಷ್ಕರ ಕಾನೂನು ಬಾಹಿರವೆಂದು ಎಸ್ಪಿಯವರಿಗೆ ತಿಳಿಸಿದ ಮಾಲೀಕ ವರ್ಗ, ಕಾರ್ಮಿಕರು ಮುಷ್ಕರ ನಡೆಸಿದರೆ ಅವರ ಮೇಲೆ ಕ್ರಮ ಕೈಗೊಳ್ಳಲು (ಬಂಧಿಸುವುದು?) ಒತ್ತಾಯಿಸುತ್ತ ಎನ್ನಲಾಗಿದೆ. (4ನೇ ಪುಟಕ್ಕೆ)

ಸರ್ಕಾರಿ ವಾಹನ ಚಾಲಕರ ಆತ್ಮ ಗೌರವದ ಮೊರೆ

ಶೃಂಗೇರಿ: ಸರ್ಕಾರಿ ವಾಹನಗಳ ಚಾಲಕರನ್ನು 1975ರಲ್ಲೇ "ಸಿ" ಗ್ರೂಪ್ (3ನೇ ಶ್ರೇಣಿ) ನೌಕರರೆಂದು ಘೋಷಿಸಿ ಸರ್ಕಾರ ಆದೇಶ ಹೊರಡಿಸಿದ್ದರೂ (ಆದೇಶ ಸಂಖ್ಯೆ 1499/ಎಸ್‌ಆರ್‌ಬಿ.75 ದಿನಾಂಕ 20–9–75) ಹಲವು ಇಲಾಖೆಗಳಲ್ಲಿ ಮೇಲಧಿಕಾರಿಗಳು ಈ ನೌಕರರನ್ನು "ಡಿ" ಗ್ರೂಪ್ ನೌಕರರಂತೆ ನಡೆಸಿಕೊಳ್ಳುತ್ತಿರುವುದಕ್ಕೆ ಜಿಲ್ಲಾ ಸರ್ಕಾರಿ ವಾಹನ ಚಾಲಕರ ಸಂಘ ತನ್ನ ತೀವ್ರ ಆಕ್ಷೇಪವನ್ನು ವ್ಯಕ್ತಪಡಿಸಿದೆ.

ಇನ್ನಾದರೂ ಇವರನ್ನು ಬೇರೆಲ್ಲ 'ಸಿ' ಗ್ರೂಪ್ ನೌಕರರಂತೆಯೇ ಗೌರವ, ಮನ್ನಣೆಗಳೊಂದಿಗೆ ನಡೆಸಿಕೊಳ್ಳುವಂತೆ ಸಂಘದ ಸಂಚಾಲಕ ಎಂ. ಎಸ್. ಬಾಲಕೃಷ್ಣ ಒತ್ತಾಯಿಸಿದ್ದಾರೆ.

ಉಚಿತ ಕ್ರೀಡಾ ತರಬೇತಿ

ಚಿಕ್ಕಮಗಳೂರು: ಜಿಲ್ಲೆಯಲ್ಲಿರುವ ಕ್ರೀಡಾ ಪಟುಗಳಿಗೆ ಹಾಗೂ ಕ್ರೀಡೆಯಲ್ಲಿ ಆಸಕ್ತಿ ಇರುವ ಯುವಜನರಿಗೆ ಪ್ರೋತ್ಸಾಹ ನೀಡುವ ದೃಷ್ಟಿಯಿಂದ ಇಲ್ಲಿನ ನೆಹರೂ ಯುವ ಕೇಂದ್ರವು ವಾಲಿಬಾಲ್, ಖೋ–ಖೋ ಮತ್ತು ಕಬ್ಬಡಿಯಲ್ಲಿ ಉಚಿತ ಕ್ರೀಡಾ ತರಬೇತಿಗಳನ್ನು ಏರ್ಪಡಿಸುವುದು ಆಸಕ್ತಿಯುಳ್ಳ ಸಂಘ–ಸಂಸ್ಥೆಗಳು. ಶಾಲಾ ಕಾಲೇಜು ಮುಖ್ಯಸ್ಥರು ಈ ಕಾರ್ಯಾಲಯಕ್ಕೆ ಲಿಖಿತ ಮೂಲಕ ತಿಳಿಸಿದಲ್ಲಿ ಕ್ರೀಡಾ ತರಬೇತಿದಾರರನ್ನು ಕಳುಹಿಸಿ ಕೊಟ್ಟು ಪ್ರೋತ್ಸಾಹಿಸಲಾಗುವುದೆಂದು ಪ್ರಕಟಣೆಯೊಂದರಲ್ಲಿ ತಿಳಿಸಲಾಗಿದೆ.

"ಸಾರ್ವಜನಿಕ ಸಾರಿಗೆಯ ಮೋಟರ್ ವಾಹನಗಳಲ್ಲಿ ಹೊಗೆ ಬತ್ತಿ ಸೇದುವುದರ ವಿರುದ್ಧ ಈಗಾಗಲೇ ಇರುವ ಶಾಸನಬದ್ಧವಾದ ನಿಯಮಗಳನ್ನು ನಿರ್ದಾಕ್ಷಿಣ್ಯವಾಗಿ ಜಾರಿಗೆ ತರಲೇಬೇಕು" — ಎನ್ನುವ ಏಕ ಮಾತ್ರ ವಾಕ್ಯವನ್ನು ಕೆ.ಎಸ್.ಆರ್.ಟಿ.ಸಿ. ಬಸ್‌ಗಳ ಹಾಗೂ ಖಾಸಗಿ ರಂಗದ ಬಸ್‌ಗಳ ಗ್ರಾಹಕರು ಶತ ಸಂಖ್ಯೆಯಲ್ಲಿ ಆಯಾ ಜಿಲ್ಲೆಯ ಪೋಲೀಸ್ ಮುಖ್ಯಾಧಿಕಾರಿಗಳಿಗೂ ವಿವಿಧ ಆರ್.ಟಿ.ಓ. ಗಳಿಗೂ ಬರೆಯಬೇಕೆಂದು ಉಡುಪಿಯ ಬಳಕೆದಾರರ ವೇದಿಕೆ ಮನವಿ ಮಾಡಿದೆ.

ಂಹರಾಜಪುರ ತಾಲ್ಲೂಕಿನ ಮಂಡಲ ಪ್ರಧಾನರು - 6

ತಾಲ್ಲೂಕಿನ ಮೂಲೆಯಲ್ಲೊಬ್ಬ ಕಿರಿಸ್ತಾನ್ ಪ್ರಧಾನ : ಮಂಡಲವುಳಿಸಿ ಮಲೆನಾಡನ್ನೂ ಉಳಿಸಬೇಕಾದ ಜನತೆ

ಬನ್ನೂರು ಮಂಡಲ

ಮೂವತ್ತಮೂರು ವರ್ಷದ ಯುವಕ ್ರಿಕ್ ಡಿ' ಕುನ್ಹ ಬಾಳೆಹೊನ್ನೂರು ಾಪದ ಬನ್ನೂರು ಗ್ರಾಮದ ಜಕ್ಕಣಿಕೆ ಮಥಾಯಿಸ್ ಡಿ' ಕುನ್ಹರ ಮಗ. ವಿ ್ಯಭ್ಯಾಸ ಮಧ್ಯಮವಾಗಿದ್ದರೂ ಚುರುಕು ಡುಗ. 'ಕಲಾರಂಗ'ದ (ಬಾಳೆಹೊನ್ನೂ) ಪೋಷಕನೂ ಹೌದೆಂಬು ಹೆಮ್ಮೆ ಪ ಕೊಳ್ಳುವ ಇವರು ಸ್ವತಃ ಕಲಾವಿದರಲ್ಲ ರೂ. ಕಲಾಸಕ್ತರೆನ್ನುವುದಂತೂ ದಿಟ. ಾನು ಪೂರ್ತಿ ವಿದ್ಯಾವಂತನಾಗದಿದ್ದರೂ ಂಡಲದ ವಿದ್ಯಾ ಪ್ರಗತಿಗೆ ಪ್ರಾಧಾನ್ಯ ಡುತ್ತೇನೆ" ಎನ್ನುವುದು ಸಂತಸ ಪಡು ಥಾದ್ದು. ಇವರ ಕಾರ್ಯ ಪ್ರವೃತ್ತಿ ಂಡಲದಲ್ಲಿ ಉತ್ತಮಗೊಳ್ಳಲಿ ಎಂದು ಿ ಕೋರುತ್ತಾ.......

ಚಿಕ್ಕವಯಸ್ಸಿನಲ್ಲಿ ಬಂದುಹೋದ ನಾ ಿಕೆಮ್ಮನ್ನು ಜ್ಞಾಪಿಸಿಕೊಳ್ಳುವವರಂತೆ ದೆ ಕಾಂಗ್ರೆಸ್‌ನಲ್ಲಿದ್ದುದನ್ನು ನೆನಪಿಸಿ ಾಳ್ಳುವ ಇವರು ಈಗ ಜನತಾ ಪಕ್ಷದ ್ರಧಾನರಾಗಿ ಆಯ್ಕೆಗೊಂಡದ್ದು ಆಕಸ್ಮಿಕ ನ್ನುವುದಕ್ಕಿಂತ ಅನಿವಾರ್ಯ ಎನ್ನುವುದು ಿಷ್ಟು ಸೂಕ್ತ. ಏಕೆಂದರೆ ಎಲ್ಲರೂ ನಾವೇ ದ್ದರೆ ಮುಂದೆ ಬೇಕಾಗಬಹುದಾದಾಗ ಕಿರಿಸ್ತಾನ್ ಒಬ್ಬರೂ ಇಲ್ಲದಿದ್ದರೆ ಹೇಗೆ? ಈ ಮೂಲೆಯಾದರೂ ಈ ಕಿರಿಸ್ತಾನರಿಗಿರಲಿ ಎಂಬಂತೆ ಜನತಾ (ತೆ) ಈ ಫ್ರೆಡ್ರಿಕ್ ಡಿ' ಕುನ್ಹರಿಗೆ ಪ್ರಧಾನ ಪಟ್ಟದ ಗುನ್ನ ಹಾಕಿದ್ದು ಕಿರಿಸ್ತಾನರಿಗೆ "ಜೈ" ಎಂದಂತಾಯಿತಲ್ಲವೆ!

ಎಲ್ಲಾ ಮಂಡಲಗಳಂತೆ ಈ ಮಂಡಲಕ್ಕೂ ನೀರು, ವಿದ್ಯುತ್, ರಸ್ತೆ ಮತ್ತು ನಿವೇಶನ-ಮನೆಗಳು ಅವಶ್ಯಕ. ಈ ಎಲ್ಲ ಅವಶ್ಯಕತೆಗಳನ್ನೂ ಸೂಕ್ತ ಬಗೆಹರಿಸುತ್ತೇನೆನ್ನುವ ಈ ಪ್ರಧಾನರು ಬಹು ತುರ್ತಾಗಿ ಗಮನ ಕೊಡಬೇಕಾದ ಪ್ರಮುಖ ವಿಚಾರ ಒಂದಿದೆ: ಇಂದಿನ ಜನತಾ ಸರ್ಕಾರದ ಹಂಬಲ-ಬಯಲು ನಾಡಿನವರ ಬೆಂಬಲ ಈ ಎರಡೂ ಒಂದಾಗಿ ಇದೇ ಮಂಡಲದ ಮಾಗುಂಡಿಯಲ್ಲಿ "ಭದ್ರಾ ಮೇಲ್ದಂಡೆ" ಯೋಜನೆಗೆ ಪ್ರಯತ್ನಿಸುತ್ತಿರುವುದು ಮಲೆನಾಡನ್ನೂ ಬಯಲ್ನಾಡಿನಂತೆ ಮಾಡುವ ಒಂದು ಕೆಟ್ಟ ಯೋಜನೆ. ಈ ಪ್ರಧಾನರು ಈ ಮಂಡಲದ ಜನತೆಯನ್ನು ಮಲೆನಾಡಿನ ಉಳಿವಿಗಾಗಿ ಹುರಿದುಂಬಿಸಿ, ಈ ಮಂಡಲದ ಪ್ರತಿ ಮನೆಯಲ್ಲೂ ಉಗ್ರಪ್ರತಿಭಟನೆ ಪ್ರತಿ ಬಿಂಬಿಸಿದ್ದೇ ಆದರೆ ಅಪ್ರತಿಮ ಹೋರಾಟಗಾರರ ಸಾಲಿಗೆ ಈ ಪ್ರಧಾನರು ಮತ್ತು ಜನತೆ ದಾಖಲಾಗುವುದು ಖಡಾ ಖಂಡಿತ.

ಅದಲ್ಲದೆ "ನಮಗೇನು?" ಎಂಬಂತೆ ಸುಮ್ಮನಾಗಿ ಅಣೆಕಟ್ಟಿಗೆ ಅವಕಾಶ ನೀಡಿದರೆ, ಈ ಮಂಡಲ ದ್ವೀಪದಲ್ಲಿ ದ್ವೀಪವಾಗಿ (ನರಸಿಂಹರಾಜಪುರವೂ ಈಗ ಒಂದು ದ್ವೀಪ ಇದ್ದಂತೆ) ನಾಗರಿಕ ಸೌಲಭ್ಯದಿಂದ ವಂಚಿತರಾಗಿ, ಅರಣ್ಯನಾಶದಿಂದ ಈ ಮಂಡಲ ನರಕ ಸದೃಶವಾಗುವುದರಲ್ಲಿ ಕಿಂಚಿತ್ತೂ ಅನುಮಾನವಿಲ್ಲ.

ಈ ಪ್ರಧಾನರ ಜೊತೆಗೂಡಿ ಈ ಮಂಡಲದ ಜನತೆ ಇಂಥ ಹೋರಾಟಕ್ಕಿಳಿದರೆ ಈ ಮಂಡಲದ ಉಳಿವು ಮಾತ್ರವಲ್ಲ, ಮಲೆನಾಡಿನ ಉಳಿವಿಗೇ ಹೋರಾಡಿದಂತಾಗುತ್ತದೆ; ಅವರಿಗೆ ಮಂಡಲವುಳಿಯಿತು, ಮಲೆನಾಡಿಗರಿಗೆ ಮಲೆನಾಡು ಉಳಿಯಿತು ಎಂಬಂತಾಗುತ್ತದೆ. ಇದರಿಂದ ಮಲೆನಾಡಿಗರು ಈ ಮಂಡಲಕ್ಕೆ ಚಿರಋಣಿಯಾಗುವರು. ಈ ವಿಚಾರದಲ್ಲಿ ಈ ಮಂಡಲದ ಪ್ರಧಾನರ ಮತ್ತು ಜನತೆಯ ಮನಸ್ಸು ಅಚಲವಾಗಲಿ ಎಂದು ಹಾರೈಸುತ್ತಾ ಮಂಡಲದ ಎಲ್ಲಾ ಪ್ರಗತಿ ಕಾರ್ಯಗಳಿಗೂ ಶುಭಕೋರುತ್ತೇನೆ.

—ಎಂ. ಐ. ಶ್ರೀನಿವಾಸ ಮೂರ್ತಿ
ಮೂಡುಬಾಗಲು

ಪದ್ಯದಂಕಣ

ಕಪ್ಪು ಮನ

ಮನದ ಕುಹಿತ
ಮೇಲೇಳದ ಹಾಗೆ
ಮುನ್ನುಗ್ಗದ ಹಾಗೆ
ಆಸೆಗಳ ಬೆನ್ನೇರಿ ಹಾರಾಡದ ಹಾಗೆ
ಆಕಾಶದೆತ್ತರಕೆ ಬೆಳಕ ಚಿಮ್ಮಿಸಿ
ಸಿಡಿಯದ ಹಾಗೆ
ಎಲ್ಲವೂ ಕುಡಿ ಚಿವುಟಿಸಿಕೊಂಡ
ಬರಡು ನೆಲದ ಸಸಿಯು
—ನಗಲೆತ್ನಿಸಿದ ಹಾಗೆ.
ನಗುವ ಕಸಿದ ಬಾಳು ಕೊನೆಗೊಮ್ಮೆಗೀಳು
ಕತ್ತಲಲಿ ಹೆಪ್ಪಾಗಿ ಮನವ ಮುಚ್ಚಿದ
ರಕ್ತ ಕಲೆಗಳು
ಓಡಲೆತ್ನಿಸಿ ಹಿಮ್ಮಡಿ ನರ ಕಡಿಸಿಕೊಂಡ
ಹೆಳವನ ಹೋರಾಟದ ಚಿನ್ಹೆಗಳು
ಮುಂದೊಮ್ಮೆ ಸ್ವಾಭಿಮಾನದಿ ಸಿಡಿದು
ಮಾನವೀಯತೆ ಮೆರೆಸಲು ಸಿದ್ಧವಾದ
ಕ್ರಾಂತಿ ಕಿಡಿಗಳು

—'ಸಬರ'
ಚಿಕ್ಕಮಗಳೂರು

ಗಾಂಧಿ

ಮಹಾತ್ಮ! ನಿನ್ನ ಪ್ರತಿಮೆಯ
ಹಿಂದೆಯೇ ಪ್ರೇಮ ಸಲ್ಲಾಪ,
ಕಳ್ಳತನ; ಮೋಸದ, ಸಂಚಿನ ಯೋಜನೆ;
ಮೋಜಿನ ವ್ಯವಸ್ಥೆಯ ಚಿಂತನೆ.
ನೀ ಬೋಧಿಸಿದ ಅಹಿಂಸೆಯ ತತ್ವ
ಬಾಳಿನಲಿ ನಡೆದು ತೋರಿದ
ಸತ್ಯ, ಸತ್ಯಾಗ್ರಹದ ಅರ್ಥ
ಪಡೆದಿವೆ ಈಗೆಲ್ಲವೂ ವ್ಯಂಗ್ಯಾರ್ಥ
ಹೇಗೆ ಸಹಿಸುವೆಯಯ್ಯ
ನೀ ಶಿಲೆಯಾಗಿ ನಿಂತು?

—ದ. ರಾಜಣ್ಣ
ಶೃಂಗೇರಿ

ಓದುಗರ ಪ್ರತಿಕ್ರಿಯೆಗಳು

24. ಸಂದರ್ಶನ ಕಣ್ತೆರೆಸುವಂತಹುದು

ಗೆಳೆಯ ನಾಗರಾಜ್,

ಹರಿಹರಪುರ ಮಠಾಧೀಶರೊಂದಿಗೆ ನೀವು ನಡೆಸಿದ ಮಾತುಕತೆಯ ಸಂದರ್ಶನ ರೂಪದ ವರದಿ ಹಲವಾರು ದೃಷ್ಟಿಗಳಿಂದ ನಮ್ಮ ಕಣ್ತೆರೆಸುವಂತಹದು. ಹಿಂದಿನಿಂದಲೂ ಸಾಂಸ್ಕೃತಿಕ ಗೋಸುಂಬೆತನಕ್ಕೆ ಹೆಸರಾದ ಈ ಸಂಸ್ಕೃತಿ ಈಗಲೂ ಅದರ ಮುಂದುವರಿಕೆಯ ಹೊಸ ಮಾರ್ಗಗಳನ್ನು ಹುಡುಕುತ್ತಿದೆ ಎನ್ನುವುದು ನಿರ್ವಿವಾದ.

ನಿಮ್ಮ ಸಂದರ್ಶನ ಕರ್ನಾಟಕದ ವಿಚಾರವಂತರೆಲ್ಲರಿಗೂ ಓದಲು ದೊರಕುವಂತಾಗಬೇಕು ಎನ್ನುವುದು ನನ್ನ ಅಭಿಪ್ರಾಯ. ನಿಮ್ಮ ಈ ಧೀಮಂತಿಕೆಗೆ ನಮ್ಮೆಲ್ಲರ ನೈತಿಕ ಬೆಂಬಲವಿದೆ.

—ಬಿ. ಗಂಗಾಧರ ಮೂರ್ತಿ,
ಗೌರಿಬಿದನೂರು.

25. ಮಠದಲ್ಲೇ ಕೋರ್ಟ್ ಕಲಾಪವೆ !?

ಪ್ರಿಯ ಸಂಪಾದಕರೆ,

ತಮ್ಮ ಪತ್ರಿಕೆಯಲ್ಲಿ 21-6-87 ಹಾಗೂ 5-7-87ರಲ್ಲಿ ಪ್ರಕಟವಾದ ಕಾವಳಿ ಲಕ್ಷ್ಮೀನಾರಾಯಣಪ್ಪನವರ ಪತ್ರಗಳನ್ನು ಒಟ್ಟಿಗೆ ಓದಿದೆ.

ಇವರ ಮೊದಲ ಪತ್ರದಲ್ಲಿ ಇವರು ಬರೆದಿದ್ದಾರೆ: "ನಿಮಗೆ ತೊಂದರೆ, ಅನ್ಯಾಯ ಆಗಿದ್ದರೆ ನ್ಯಾಯಾಲಯಕ್ಕೆ ಮೊರೆ ಹೋಗಿರಿ" ಎಂದು. ಎರಡನೆಯದರಲ್ಲಿ "ನೀವುಗಳು ನಮ್ಮ ಸ್ವಾಮೀಜಿಯನ್ನು ಕೋರ್ಟಿಗೆ ಎಳೆದರೆ ಆ ಸಮಯದಲ್ಲಿ ನಾವು ಮಠದಲ್ಲೇ ಕಲಾಪ ನಡೆಸುವಂತೆ ಕೋರ್ಟಿಗೆ ಮನವಿ ಮಾಡುತ್ತೇವೆ" ಎಂಬಂತೆ ಬರೆದಿದ್ದಾರೆ.

ಅಂದರೆ. ಸ್ವಾಮೀಜಿಯನ್ನು 'ಕೋರ್ಟಿಗೆ ಎಳೆಯುವಂತೆ' ದಾರಿ ತೋರಿಸಿ ಕೊಟ್ಟವರು ಅವರೇ ಎಂದು ಅವರ ಮೊದಲ ಪತ್ರದಿಂದಲೇ ತಿಳಿಯುತ್ತದೆ. ಈ ಅಂತರ್ಜಾತಿ ಮದುವೆಯ ಬಗ್ಗೆ ಹಗರಣ ಎಬ್ಬಿಸಿದವರು ಹರಿಹರಪುರ ಮಠದ ಶಿಷ್ಯ ಮಂಡಳಿಯ ಕೆಲವು ಮುಖಂಡರೆಂದು ಬರೆದುದಕ್ಕೆ ತಮ್ಮ ಹೆಗಲು ಮುಟ್ಟಿ ನೋಡಿಕೊಂಡಿರುವ ಇವರು ತಮ್ಮ ಗುರುವಿಗೆ ತಮ್ಮ ಮೊದಲ ಪತ್ರ ಓದಿ ಬೇಸರವಾಗುವುದೆಂದೋ ಏನೋ ಮತ್ತೊಂದು ಪತ್ರಬರೆದು ಅವರನ್ನು ಸಮಾಧಾನಪಡಿಸಲೆತ್ನಿಸಿದಂತೆ ಕಾಣುತ್ತದೆ.

ಆದರೆ, ಅವರ ಉದ್ದೇಶವೇನೇ ಇರಲಿ, ಇವರಿಗೆ ಕೋರ್ಟ್ ಕಲಾಪವನ್ನು ಮಠದಲ್ಲಿ ನಡೆಸಲು ಸ್ವಾಮೀಜಿ ಒಪ್ಪಿಗೆ ಕೊಡುವರೆ? ಎಂಬುದು ನನ್ನ ಪ್ರಶ್ನೆ.

ಏಕೆಂದರೆ, ನಾನು ಇದೇ ಮಠದ ಆಡಳಿತಕ್ಕೆ ಒಳಪಟ್ಟ ಕಾಲೇಜೊಂದರಲ್ಲಿ ವಿದ್ಯಾರ್ಥಿಯಾಗಿದ್ದಾಗ ನನ್ನ ಮೇಲೆ ವಿನಾಕಾರಣ ಅನೇಕ ಆರೋಪಗಳನ್ನು ಹೊರಿಸಲಾಗಿತ್ತು. ನಾನು ನ್ಯಾಯಕ್ಕಾಗಿ ಆಡಳಿತ ವರ್ಗವನ್ನು ಕೇಳಿಕೊಂಡಾಗ, "ನೀನು ಅಪರಾಧಿ ಹೌದೋ ಅಲ್ಲವೋ ಎಂದು ವಿಚಾರಣೆ ನಡೆಸಲು ಕಾಲೇಜ್ ಆಗಲೀ ಮಠವಾಗಲೀ ಕೋರ್ಟ್ ಅಲ್ಲ" ಎಂದು ನನಗೆ ಉತ್ತರ ನೀಡಲಾಗಿತ್ತು.

ಹೀಗಿರುವಾಗ, ಈಗ ಮಾತ್ರ ಕೋರ್ಟ್‌ನಲ್ಲಿ ನಡೆಯಬೇಕಾದ ಕಲಾಪವನ್ನು ಮಠದಲ್ಲಿ ನಡೆಸಲು ಆಸ್ಪದವಿದೆಯೆ?

—ಪ್ರಖ್ಯಾತ್ ಶೆಟ್ಟಿ,
ಹರಿಹರಪುರ

26. ಪರಿವರ್ತನೆ ಅವಶ್ಯಕ

ಪ್ರಿಯ ಸಂಪಾದಕರೆ,

ಜಾತಿ ಪದ್ಧತಿಗೆ ಕಟ್ಟುಬಿದ್ದು ಇಂದಿನ ಸಮಾಜ ತತ್ತರಿಸುತ್ತಿರುವ ಈ ಸಂದರ್ಭದಲ್ಲಿ, ನಿಮ್ಮ ನೇತೃತ್ವದಲ್ಲಿ ಜರುಗಿದ ಮದುವೆ ವಿದ್ಯಾವಂತ ಯುವಜನಾಂಗಕ್ಕೆ ಅನುಕರಣೀಯ ಮತ್ತು ಶ್ಲಾಘನೀಯ ಕೂಡ.

ಹರಿಹರಪುರ ಶ್ರೀಗಳ ಸಾರ್ವಜನಿಕ ಭಾಷಣಗಳನ್ನು ಕೇಳಿದಾಗ, ತಮ್ಮೊಡನೆ ನಡೆದ ಸಂದರ್ಶನದಲ್ಲಿ ಆಡಿದ ದ್ವಂದ್ವಾರ್ಥದ (ಅದ್ವೈತದವರಲ್ಲಿ ದ್ವೈತದವರ ನಡವಳಿಕೆ) ಮಾತುಗಳನ್ನು ಗಮನಿಸಿದಾಗ, ವೇದಾಧ್ಯಯನ ಶಿಬಿರ, ಶಿಕ್ಷಣಗಳಿಗೆ ಅವರು ನೀಡುತ್ತಾ ಬಂದಿರುವ ಮಹತ್ವ ನೋಡಿದಾಗ,

(3ನೇ ಪುಟಕ್ಕೆ)

27. ಈ ಅಸಹ್ಯ ಕಟ್ಟುಪಾಡುಗಳು....!

ಮಾನ್ಯರೆ,

ಹೆತ್ತ ತಂದೆ-ತಾಯಿಗಳಿಗೆ, ಹಿರಿಯರಿಗೆ ಹಿಂದಿನಿಂದ ರೂಢಿಸಿಕೊಂಡು ಬಂದಿರುವ ಸಂಪ್ರದಾಯ, ನೀತಿ-ನಿಯಮಗಳನ್ನು ಒಮ್ಮೆಲೇ ಬಿಟ್ಟು ಬಿಡಲು ಮನಸ್ಸು ಹಿಂಜರಿಯುತ್ತದೆ. ಅವರೆಷ್ಟೇ ವೈಚಾರಿಕವಾಗಿದ್ದರೂ ತಮ್ಮದೇ ಮನೆಯಲ್ಲಿ ಸಮಾಜದ ಮೇಲ್ಜಾತಿ - ಕೀಳ್ಜಾತಿಯೆನಿಸಿಕೊಂಡುದರ ಸಂಬಂಧಕ್ಕೆ ಅವರ ಆತ್ಮ ಸುತರಾಂ ಒಪ್ಪಲಾರದು. ಇಂತಹುದರಲ್ಲಿ ವೃದ್ಧರಾದ ನಿಮ್ಮ ತಂದೆ-ತಾಯಿಗಳ ಒಪ್ಪಿಗೆ ಅತ್ಯಂತ ಪ್ರಶಂಸನೀಯ.

ಬ್ರಾಹ್ಮಣ ಸಮಾಜದ ಮುಖಂಡರ ಬಹಿಷ್ಕಾರ, ಪ್ರಾಯಶ್ಚಿತ್ತ, ಶುದ್ಧೀಕರಣ, ಪಂಚಗವ್ಯ ಇವೆಲ್ಲದರಿಂದ ಪುನಃ ಜಾತಿಗೆ ಸೇರಿಸಿಕೊಳ್ಳುವಿಕೆ—ಛಿ! ಎಂಥ ಹೇಸಿಗೆಯ

(3ನೇ ಪುಟಕ್ಕೆ)

ಅಸಹ್ಯ ಕಟ್ಟುಪಾಡುಗಳು

(ನೆ2ೀ ಪುಟದಿಂದ)

ಕೃತ್ಯ? ಇದಕ್ಕೆ ಅರ್ಥವಿದೆಯೇ? ಆ ಇಳಿ ವಯಸ್ಸಿನ ತಂದೆ–ತಾಯಿಗಳ ಮನಸ್ಸಿನ ಮೇಲೆ ಎಂತಹ ಸವಾರಿ ಇವರದು? 'ಒಳಗೆ ಹುಳುಕು, ಮೇಲೆ ಥಳುಕು' —ಇಂತಹವರಿಗಾಗಿಯೇ ಹುಟ್ಟಿದ ಗಾದೆ ಮಾತು ಇರಬೇಕಲ್ಲವೆ?

ನಿಮ್ಮಗಳ ಈ ಕಾರ್ಯ ಸಮಾಜದ ಕಣ್ಣನ್ನೊಮ್ಮೆ ವೈಚಾರಿಕತೆಯ ಕಡೆಗೆ, ಹುರುಳಿಲ್ಲದ ಜಾತೀಯತೆಯ ಕೆಸರಿನ ಕಡೆಗೆ ತೀವ್ರವಾಗಿ ಹೊರಳಿಸುವಂತೆ ಮಾಡಿದೆ.

—'ಸುಸವಾ'
ಹೊಸಕೊಪ್ಪ

ಗ್ರಾಮಸ್ಥರ ದೂರು ಅಧಿಕಾರಿಗಳಿಂದ ತನಿಖೆ :

ಒತ್ತುವರಿ, ಅರಣ್ಯ ನಾಶದ ಆರೋಪ

ಜಯಪುರ: ಇಲ್ಲಿಗೆ ಸಮೀಪದ ಎಲೆಮಡಲು ಗ್ರಾಮದಲ್ಲಿ ವ್ಯಾಪಕವಾಗಿ ಸರ್ಕಾರಿ ಕಾಡಿನ ಒತ್ತುವರಿ ಹಾಗೂ ಅರಣ್ಯ ನಾಶವಾಗಿರುವುದಾಗಿ ಗ್ರಾಮಸ್ಥರಿಂದ ದೂರೊಂದು ಬಂದಿದೆ.

ಈ ವಿಚಾರವನ್ನು ನೂತನ ಡಿ.ಎಫ್.ಓ. ಕಿಶನ್ ಸಿಂಗ್ ಸುಗಾರ ಅವರ ಗಮನಕ್ಕೆ 'ಮುಂಜಾವು' ತಂದಿದ್ದು ಇದರ ತನಿಖೆಯನ್ನು ವಲಯ ಅರಣ್ಯ ರಕ್ಷಣಾಧಿಕಾರಿಗಳಿಗೆ ಒಪ್ಪಿಸಿರುವುದಾಗಿ ಅವರು ತಿಳಿಸಿದ್ದಾರೆ.

ಒತ್ತುವರಿ ಮತ್ತು ಅರಣ್ಯ ನಾಶ ಆಗಿರುವುದು ತನಿಖೆಯಿಂದ ದೃಢಪಟ್ಟಲ್ಲಿ, ಒಂದು ವೇಳೆ ಅದು ಕಂದಾಯ ಇಲಾಖೆಗೆ ಸೇರಿದ ಭೂಮಿಯಾದರೆ ಆ ಇಲಾಖೆ ಮತ್ತು ಅರಣ್ಯ ಇಲಾಖೆ ಜಂಟಿಯಾಗಿಯೂ, ಅರಣ್ಯ ಇಲಾಖೆಗೆ ಸೇರಿದ್ದಾದರೆ ಅರಣ್ಯ ಇಲಾಖೆಯೂ ಕಾನೂನು ರೀತ್ಯಾ ಕ್ರಮ ಕೈಗೊಳ್ಳುವುದೆಂದು ಸುಗಾರ ಭರವಸೆ ಕೊಟ್ಟಿದ್ದಾರೆ.

ವಲಯ ಅಧಿಕಾರಿಗಳ ವರದಿಯನ್ನು ಕಾಯಲಾಗುತ್ತಿದೆ.

ದೂರಿನ ಸಾರಾಂಶ

ಎಲೆಮಡಲು ಗ್ರಾಮದ ಸ! ನಂ. 6ರಲ್ಲಿ 15 ಎಕರೆ ಎಸ್ಟೇಟ್ ಹೊಂದಿರುವ ಕಂದೂರು ವೆಂಕಟೇಶ ಹೆಗ್ಡೆ ಎಂಬವರು ತಮ್ಮ ಜಮೀನಿನ ಪಕ್ಕದ ರೆವಿನ್ಯೂ ಜಾಗ ಸುಮಾರು 50 ಎಕರೆಯಷ್ಟನ್ನು ಒತ್ತುವರಿ ಮಾಡಿ ಬೇಲಿ ಹಾಕಿಕೊಂಡಿದ್ದಾರೆ. ಈಚೆಗೆ ಪುನಃ 20–25 ಎಕರೆಯಷ್ಟು ರೆವಿನ್ಯೂ ಕಾಡಿಗೆ ತುರ್ತಾಗಿ ಬೇಲಿ ಹಾಕಿ, ದುರ್ಗದ ಬೆಟ್ಟದಲ್ಲಿಯೇ ಅತ್ಯಂತ ದಟ್ಟವಾದ ಈ ಕಾಡಿನಿಂದ ಹಸಿ ಮರಗಳನ್ನು ಕಡಿಸಲಾಗುತ್ತಿದೆ. ಮರವನ್ನು ಜಯಪುರದ ಜೋಸೆಫ್ ಎಂಬವರು ಕೊಂಡಿದ್ದಾರೆಂದು ತಿಳಿದು ಬಂದಿದೆ. ಗ್ರಾಮಸ್ಥರು ಕೇಳಿದರೆ "ಹಳೇ ರಿಕಾರ್ಡ್" ಎನ್ನುತ್ತಿದ್ದಾರೆ—ಎಂಬುದಾಗಿ ಗ್ರಾಮಸ್ಥರು ದೂರಿದ್ದಾರೆ.

ಈ ಅರಣ್ಯ ಪ್ರದೇಶ ಈ ಭಾಗದ ತರಿ, ಬಾಗಾಯ್ತು ಜಮೀನುಗಳಿಗೆ ಆಧಾರವಾದ ನೀರಿನ ಮೂಲವಾಗಿದ್ದು, ಇಲ್ಲಿ ಅರಣ್ಯ ನಾಶದಿಂದ ಆ ಭೂಮಿಯೆಲ್ಲಿ ಬಂಜರಾಗುವುದಲ್ಲದೆ ತೀವ್ರವಾಗಿ ಭೂ ಕುಸಿತವು ಕೂಡ ಉಂಟಾಗಬಹುದೆಂದೂ ಭೀತಿ ವ್ಯಕ್ತಪಡಿಸಿದ್ದಾರೆ.

ಪರಿವರ್ತನೆ ಅವಶ್ಯಕ

(2ನೇ ಪುಟದಿಂದ)

ಅವರು ಅಂತರಂಗದಲ್ಲಿ ಸಾಮಾಜಿಕ ಬದಲಾವಣೆಗೆ ಕೊಟ್ಟ ಮಹತ್ವದ ಅರಿವಾಗುತ್ತದೆ. ಆದರೆ ಶಿಷ್ಯ ಮಂಡಳಿಯ ಒತ್ತಾಯಕ್ಕೆ ಮಣಿದು ಪಂಚಗವ್ಯ ಪ್ರಾಶನ, ಬಹಿಷ್ಕಾರ ಮುಂತಾದ ಅನಾಗರಿಕ ಅಸಡ್ಡಾಳತನಕ್ಕೆ ಇಳಿದಿರುವುದು ಅವರ (ಅಥವಾ ಯಾವುದೇ ಮಠಾಧಿಪತಿಯೊಬ್ಬರ) ದುರಂತ.

ಆದ್ದರಿಂದ ಅವರು ಸಂದರ್ಶನದಲ್ಲಿ ಹೇಳಿರುವಂತೆ, ಅವರೇ ಸ್ವಪ್ರೇರಣೆಯಿಂದ ಮಠಾಧಿಪತ್ಯ ಬಿಟ್ಟು, ಶಾಲೆಯ ಕೋಣೆಯಲ್ಲಿ ವಾಸಿಸುವ ಕಾಲ ಖಂಡಿತಾ ಸನ್ನಿಹಿತವಾಗಿದೆ. ಇಂದಿನ ಮಕ್ಕಳಿಗಾದರೂ ಕಾಲಕ್ಕನುಗುಣವಾಗಿ ಬದಲಾಗಬೇಕಾದ ಮಹತ್ವ, ಅಂತರ್ಜಾತೀಯ ವಿವಾಹ, ದುಡಿವ ಎಲ್ಲರ ಏಳಿಗೆ, ಅಸ್ಪೃಶ್ಯತೆ ನಿವಾರಣೆ ಮುಂತಾದವುಗಳನ್ನು ತಿಳಿಸಿ, ಹೊಸ ಯುವ ಪೀಳಿಗೆ ನಿರ್ಮಾಣಕ್ಕೆ ಕಾರಣಕರ್ತರಾಗಲಿ.

ಇವರಿಂದಲಾದರೂ ಚಿಕ್ಕಮಗಳೂರು ಜಿಲ್ಲೆಯಲ್ಲಿ ಯಾವ ಕಾಲೂಕ್ಕ ಒಂದು ಮೆದಕಿನಾಳ ಆಗದಿರಲಿ. ಎಲ್ಲರನ್ನೂ ಯಾವಾಗಲೂ ಮಾತಿನ ಮೋಡಿಯಿಂದ ಮೋಸಗೊಳಿಸಲು ಅಸಾಧ್ಯ. ಕೃತಿಗಿಳಿಯಲಿ. ಮಾನವನನ್ನು ವಿಶ್ವ ಮಾನವತೆಯತ್ತ ಒಯ್ಯಲಿ

—ಶಿವಶಂಕರ ಭಟ್ಟ, ಬಾಳೆಹೊಳೆ.

ಓದುಗರ ಪತ್ರ

ಖೋಟಾ ತಪಾಸಣೆಕಾರನ ಬಗ್ಗೆ ಎಚ್ಚರ

ಮಾನ್ಯರೆ,

ದಿನಾಂಕ 14–5–1987 ಮತ್ತು 15–7–1987ರಂದು ನರಸಿಂಹರಾಜಪುರ ತಾ|| ಬಾಳೆಹೊನ್ನೂರಿಗೆ ಸಂಬಂಧಿಸಿದ ಸರ್ಕಾರಿ ವಿವಿಧ ವೇತನಗಳ ಪ್ರಯೋಜನದಾರರಿಂದ ಯಾರೋ ನಯ ವಂಚಕನು "ನಾನು ತಾಲ್ಲೂಕು ಕಚೇರಿಯ ತಪಾಸಕನಾಗಿದ್ದು ಸರ್ಕಾರದಿಂದ ಬರುತ್ತಿರುವ ವಿಧವಾ ವೇತನ, ಅಂಗವಿಕಲ ವೇತನ, ವೃದ್ಧಾಪ್ಯ ವೇತನ ಮುಂತಾದ್ದರ ತಪಾಸಣೆ ಮಾಡಿದಾಗ ನೀವುಗಳು ಸರ್ಕಾರಕ್ಕೆ ಸುಳ್ಳು ದಾಖಲೆ ಒದಗಿಸಿ ಹಣ ಪಡೆಯುತ್ತಿದ್ದೀರಿ. ಅದನ್ನು ನಿಲ್ಲಿಸಿಬಿಡುತ್ತೇನೆ" ಎಂದು ಹೆದರಿಸಿ ಪ್ರಯೋಜನದಾರರಿಂದ ರೂ. 30 ರಿಂದ 50 ರವರೆಗೂ ವಸೂಲಿ ಮಾಡಿದ ಪ್ರಕರಣ ಬೆಳಕಿಗೆ ಬಂದಿದ್ದು ಸಾರ್ವಜನಿಕರಿಂದ ದೂರು ಸಹ ಬಂದಿರುತ್ತೆ.

ಈ ಬಗ್ಗೆ ತಾಲ್ಲೂಕು ಕಛೇರಿಯಿಂದಾಗಲೀ ಪ್ರಯೋಜನದಾರರನ್ನು ನೇರವಾಗಿ ಸಂಪರ್ಕಿಸಿ ಅವರನ್ನು ತಪಾಸಣೆ ಮಾಡುವ ಅಧಿಕಾರವನ್ನು ಯಾರಿಗೂ ನೀಡಿಲ್ಲ. ಆದ್ದರಿಂದ ಸಾರ್ವಜನಿಕರು ಇಂಥವರಿಂದ ಮೋಸ ಹೋಗದೆ. ಇಂಥ ಸಂದರ್ಭಗಳಲ್ಲಿ ನನ್ನನ್ನಾಗಲಿ, ಹತ್ತಿರದ ಪೋಲೀಸ್ ಅಧಿಕಾರಿಗಳನ್ನಾಗಲಿ ಖುದ್ದು ಭೇಟಿ ಮಾಡುವಂತೆ ಅಥವಾ ಸಂಪರ್ಕಿಸುವಂತೆ ವಿನಂತಿಸುತ್ತೇನೆ.

—ತಹಸೀಲ್ದಾರ್
ನ. ರಾ. ಪುರ ತಾ||

ಮತೀಯ ಅಲ್ಪ ಸಂಖ್ಯಾತರಿಗೆ ವಾಹನ ಚಾಲನೆ ತರಬೇತಿಗೆ ಅರ್ಜಿ ಆಹ್ವಾನ

ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ವತಿಯಿಂದ ಮತೀಯ ಅಲ್ಪಸಂಖ್ಯಾತರೆಂದು ಪರಿಗಣಿಸಲ್ಪಟ್ಟಿರುವ ಮುಸ್ಲಿಂ, ಕ್ರಿಶ್ಚಿಯನ್, ಜೈನ, ಬೌದ್ಧ, ಸಿಖ್, ಪಾರ್ಸಿ ಹಾಗೂ ಆಂಗ್ಲೋ ಇಂಡಿಯನ್ ವರ್ಗಕ್ಕೆ ಸೇರಿದ ವಿದ್ಯಾವಂತ ನಿರುದ್ಯೋಗಿ ಯುವಕರಿಗೆ ಆಟೋರಿಕ್ಷಾ, ಲಘುವಾಹನ ಮತ್ತು ಭಾರಿವಾಹನ ಚಾಲನೆ ತರಬೇತಿಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅರ್ಜಿದಾರರ ಕುಟುಂಬದ ಒಟ್ಟು ವಾರ್ಷಿಕ ವರಮಾನ ಎಲ್ಲಾ ಮೂಲಗಳಿಂದಲೂ ರೂ. 6000 ಕ್ಕೆ ಮೀರಿರಬಾರದು.

ಒಂದು ತಿಂಗಳ ಅವಧಿಯ ಈ ತರಬೇತಿಗೆ ಆಯ್ಕೆಯಾದ ಅಭ್ಯರ್ಥಿಗೆ ರೂ. 200 ತರಬೇತಿ ಭತ್ಯವನ್ನಾಗಿ ಕೊಡಲಾಗುವುದು. ಹಾಗೂ ಅಭ್ಯರ್ಥಿಯ ವಾಸಸ್ಥಳದಿಂದ ತರಬೇತಿ ಕೇಂದ್ರಕ್ಕೆ ಒಂದು ಬಾರಿ ಹೋಗಿ ಬರಲು ಬಸ್ಸಿನ ದರವನ್ನು ನೀಡಲಾಗುವುದು. ಈ ಕೆಳಕಂಡತೆ ವಾಹನ ಚಾಲನೆ ತರಬೇತಿ ಶುಲ್ಕವನ್ನು ತರಬೇತಿ ಶಾಲೆಯ ಪ್ರಾಂಶುಪಾಲರಿಗೆ ಕೊಡಲಾಗುವುದು.

ಅರ್ಜಿ ಫಾರಂ ಮತ್ತು ಹೆಚ್ಚಿನ ಮಾಹಿತಿಗಳನ್ನು ಜಿಲ್ಲಾ ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಪಡೆಯಬಹುದು. ಅರ್ಜಿ ಸಲ್ಲಿಸಲು ಕಡೇ ದಿನಾಂಕ 31–7–1987.

ಶಂಕರ್ ಸಾರಿಗೆ ಕಾರ್ಮಿಕರ ಮುಷ್ಕರ ಆರಂಭ

(1ನೇ ಪುಟದಿಂದ)

ಜು. 17ರ ರಾತ್ರಿ ಕಾರ್ಮಿಕ ಮುಖಂಡ ಅನಂತ ಸುಬ್ಬರಾವ್ ಎಸ್ಪಿ, ಡಿ.ಸಿ.ಗಳೊಂದಿಗೆ ಚರ್ಚಿಸುವಾಗ ಸರ್ಕಾರದ ಈ ಆದೇಶವನ್ನು ಉಲ್ಲೇಖಿಸಿ ಮುಷ್ಕರವನ್ನು ನಡೆಸದಿರುವಂತೆ ಎಸ್ಪಿ ಸೂಚಿಸಿದರೆನ್ನಲಾಗಿದೆ. "**ಆದರೆ ಸರ್ಕಾರ ಮುಷ್ಕರವನ್ನೇ ನಿಷೇಧಿಸಿ ಆಜ್ಞೆಯನ್ನೇನೂ ಹೊರಡಿಸಿಲ್ಲ. ಪ್ರಕರಣವನ್ನು ನ್ಯಾಯಾಲಯಕ್ಕೊಪ್ಪಿಸಿದಾಕ್ಷಣಮುಷ್ಕರ ಕಾನೂನು ಬಾಹಿರ ಎನ್ನಿಸಿಕೊಳ್ಳುವುದಿಲ್ಲ**" ಎಂದು ಅನಂತ ಸುಬ್ಬರಾವ್ ನೀಡಿದ ವಿವರಣೆಯನ್ನು, ಹಿಂದೆ ಕಾನೂನು ಸಚಿವಾಲಯದಲ್ಲಿ ಉಪಕಾರ್ಯದರ್ಶಿಯಾಗಿದ್ದ ಜಿಲ್ಲಾಧಿಕಾರಿಯವರು ಅನುಮೋದಿಸಿದಾಗ-ಎಸ್ಪಿ ಅರ್ಥ ಮಾಡಿಕೊಂಡು ಕೆಲಸ ಮಾಡಬಯಸುವ ಶಂಕರ್ ಕಂಪೆನಿ ಕಾರ್ಮಿಕರಿಗೆ ರಕ್ಷಣೆ ಕೊಡುವುದಾಗಿ ತಿಳಿಸಿದರು.

ಅನಂತರ ಸುಬ್ಬರಾವ್ ಅವರು, ಮಾಲೀಕವರ್ಗ ಖೋಟಾ ಕಾರ್ಮಿಕರಿಂದ ಹಾಗೂ ಬಾಡಿಗೆ ಜನಗಳಿಂದ ಬಸ್ಸುಗಳನ್ನು ಓಡಿಸಲು ಯತ್ನಿಸಬಹುದಾದ್ದರಿಂದ, ಕಾನೂನು ಪ್ರಕಾರ, ಮುಷ್ಕರ ಆರಂಭವಾಗುವ ಮೊದಲು ಕಂಪೆನಿಯ ಸಿಬ್ಬಂದಿ ವರ್ಗಕ್ಕೆ ಸೇರಿದವರ ಹೊರತು ಬೇರೆ ಯಾರು ಬಸ್ಸುಗಳನ್ನು ಓಡಿಸಿದರೂ ಅಂಥ ಬಸ್ಸುಗಳನ್ನು ಮುಟ್ಟುಗೋಲು ಹಾಕಿಕೊಳ್ಳಬೇಕೆಂದು ಹಿರಿಯ ಅಧಿಕಾರಿಗಳಿಬ್ಬರಿಗೂ ಮನವಿ ಮಾಡಿದರು.

ಇದನ್ನೊಪ್ಪಿದ ಅಧಿಕಾರಿಗಳು ಮಾಲೀಕರಿಗೆ ಸೂಕ್ತ ಸೂಚನೆ ಕೊಟ್ಟರು. ಅದರಂತೆ ಮುಷ್ಕರದ ವೇಳೆ ತಾನು ಓಡಾಡಿಸಲಿರುವ ಬಸ್ಸುಗಳು ಹಾಗೂ ಅವುಗಳನ್ನು ನಡೆಸುವ ಸಿಬ್ಬಂದಿಯ ಪಟ್ಟಿಯನ್ನು ಕಂಪೆನಿ ಸಲ್ಲಿಸಿತು.

ಅಂದು ರಾತ್ರಿ ಕಾರ್ಮಿಕರ ಜೊತೆ ಮಾತುಕತೆ ನಡೆಸಿದ ಅನಂತ ಸುಬ್ಬರಾವ್, ಯಾವ ಕಾರಣಕ್ಕೂ ಉದ್ವಿಗ್ನಗೊಂಡು ಗಲಭೆ–ಗಲಾಟೆಗಳಿಗೆ ಅವಕಾಶ ಕೊಡಬಾರದೆಂದೂ, ಅಂಥ ಸಂದರ್ಭ ಸೃಷ್ಟಿಸಿ, ಕಾನೂನು–ಶಾಂತಿ ಹೆಸರಲ್ಲಿ ಕಾರ್ಮಿಕರನ್ನೆಲ್ಲ ಬಂಧಿಸಿ ಮುಷ್ಕರ ಮುರಿಯುವುದು ಎಲ್ಲಾ ಲುಚ್ಚ ಮಾಲೀಕ ವರ್ಗಗಳ ಕುತಂತ್ರವಾಗಿರುತ್ತದೆಂದೂ ಎಚ್ಚರಿಸಿ, ಅವರ ನ್ಯಾಯಯುತ ಹೋರಾಟ ಶಾಂತಿಯುತವಾಗಿ ನಡೆದು ಯಶಸ್ವಿಯಾಗಲೆಂದು ಹಾರೈಸಿದರು.

ಸರ್ಕಾರಿ ಬಸ್ಸುಗಳು

ಕಾರ್ಮಿಕ ಮುಷ್ಕರದ ವೇಳೆ ಸಾರ್ವಜನಿಕರಿಗೆ ತೊಂದರೆಯಾಗದಿರಲು ರಾಜ್ಯ ರಸ್ತೆ ಸಾರಿಗೆ ಸಂಸ್ಥೆ 25 ಬಸ್ಸುಗಳನ್ನೂ ಅವುಗಳ ಓಡಾಟದ ಮೇಲ್ವಿಚಾರಣೆಗೆ ಮೂವರು ಇನ್‌ಸ್ಪೆಕ್ಟರುಗಳನ್ನೂ ಒದಗಿಸಿದ್ದು, ಬಹುತೇಕ ಎಲ್ಲಾ ಮಾರ್ಗಗಳಲ್ಲಿ ಹಾಗೂ ಪ್ರಯಾಣಿಕರ ಸಂಖ್ಯೆ ಹೆಚ್ಚಿರುವ ಕಡೆಗೆಲ್ಲ ಈ ಬಸ್ಸುಗಳು ಓಡಾಡುತ್ತಿವೆ. ಯಾವುದೇ ಸಂದರ್ಭದಲ್ಲೂ ರಾಜ್ಯ ಸಾರಿಗೆ ಬಸ್ಸುಗಳನ್ನು ವ್ಯವಸ್ಥೆ ಮಾಡಲು ಸಿದ್ಧವಿರುವುದಾಗಿ ತಿಳಿಸಿರುವ ಜಿಲ್ಲಾಧಿಕಾರಿಗಳು ಸಾರ್ವಜನಿಕರಿಗೆ ಮುಷ್ಕರದಿಂದ ಆಗ ಬಹುದಾದ ಅನಾನುಕೂಲಕ್ಕಾಗಿ ವಿಷಾದ ವ್ಯಕ್ತಪಡಿಸಿದ್ದಾರೆ.

ಬಾಡಿಗೆ ಡ್ರೈವರ್‌ಗಳು

ಜು. 17 ರ ರಾತ್ರಿ ಹಿರಿಯ ಅಧಿಕಾರಿಗಳಿಗೆ ಪಟ್ಟಿಸಲ್ಲಿಸುವ ಮೂಲಕ ಒಪ್ಪಿಕೊಂಡಿದ್ದ **ಕಾನೂನಿನ** ಚೌಕಟ್ಟನ್ನು ಮುಷ್ಕರದ ಆರಂಭದ ದಿನವಾದ ಜು. 18 ರಂದು ಕಂಪೆನಿ ಮುರಿದು ಬೇರೆ ಸಂಸ್ಥೆಗಳ ಡ್ರೈವರ್‌ಗಳನ್ನು ಬಸ್ ಓಡಿಸಲು ಬಳಸಿಕೊಂಡಿದ್ದಾಗಿ ಕಾರ್ಮಿಕ ಮುಖಂಡರು ಪೋಲೀಸ್ ಅಧಿಕಾರಿಗಳಿಗೆ ದೂರು ನೀಡಿದ ಮೇರೆಗೆ ಅಂಥ ಕೆಲವನ್ನು ಪತ್ತೆ ಹಚ್ಚಿ ಕ್ರಮ ಕೈಗೊಳ್ಳಲಾಯಿತೆನ್ನಲಾಗಿದೆ. ಅಂದು ಒಟ್ಟು 22 ಬಸ್‌ಗಳು ಓಡಾಡಿದುವೆಂದು ತಿಳಿದು ಬಂದಿದೆ. (ಕಂಪೆನಿಯ ಒಟ್ಟು ಸರ್ವಿಸ್‌ಗಳ ಸಂಖ್ಯೆ 64 ಎನ್ನಲಾಗಿದೆ.)

ಅಂದು ಕೆಲಸ ಮಾಡಿದ ಹಲವು ಮಂದಿ ಕಂಪೆನಿಯ ಹಂಗಾಮಿ ಮತ್ತಿತರ ಕಾರ್ಮಿಕರನ್ನು ಮುಷ್ಕರ ನಿರತ ಕಾರ್ಮಿಕರು ಮನವೊಲಿಸಿ ಕೆಲಸಕ್ಕೆ ಹೋಗದೆ ಮುಷ್ಕರದಲ್ಲಿ ಭಾಗವಹಿಸುವಂತೆ ಮನವೊಲಿಸಿದ ಪರಿಣಾಮವಾಗಿ, ಮುಷ್ಕರದ 2ನೇ ದಿನವಾದ ಭಾನುವಾರ ಕಂಪೆನಿಯ ಕೇವಲ 4 ಬಸ್‌ಗಳು ಓಡಾಡಿದವು. ಈ ಎಲ್ಲ ಬಸ್‌ಗಳಿಗೂ ಪೋಲೀಸ್ ರಕ್ಷಣೆ ನೀಡಲಾಗಿತ್ತು.

ಮೂರ್ನಾಲ್ಕು ಕಡೆ ಸಣ್ಣಪುಟ್ಟ ಘರ್ಷಣೆ ಅಥವಾ ಕಲ್ಲು ಎಸೆದ ಘಟನೆಗಳನ್ನು ಬಿಟ್ಟರೆ ಬಹುತೇಕ ಮುಷ್ಕರ ಶಾಂತಿಯುತವಾಗಿ ನಡೆಯುತ್ತಿದ್ದು, ಭಾನುವಾರ 2ನೇ ದಿನ ಮುಗಿಸಿ ಮುಂದುವರಿಯುತ್ತಿದೆ.

ಕೃಷಿ ಸಾಮಗ್ರಿಗಳ ವಿತರಣೆ

ಶೃಂಗೇರಿ: ಈ ತಾಲ್ಲೂಕಿನ ಮರ್ಕಲ್ ಮಂಡಲ ಪಂಚಾಯ್ತಿ ವ್ಯಾಪ್ತಿಯಲ್ಲಿನ 21 ಮಂದಿ ಗಿರಿಜನ ರೈತರಿಗೆ 11.700 ರೂ. ಬೆಲೆಯ ಕೃಷಿ ಸಾಮಗ್ರಿಗಳನ್ನು ಕೆ. ಎಂ. ಶ್ರೀನಿವಾಸ್ ಅಧ್ಯಕ್ಷತೆಯಲ್ಲಿ ಜಿಲ್ಲಾ ಪರಿ[illegible]ಸದಸ್ಯ ಕೆ. ವಿ. ರಾಮಪ್ಪಯ್ಯ ವಿತ[illegible] ಮಾಡಿದರು.

ನೂತನ ಪದಾಧಿಕಾರಿಗಳು

ಕೊಪ್ಪ ಲಯನ್ಸ್ ಕ್ಲಬ್

ನೂತನ ಸಾಲಿಗೆ ಲಯನ್ಸ್ ಕ್ಲಬ್ ಅಧ್ಯಕ್ಷರಾಗಿ ಕೆ. ವಸಂತ ಅಜಿಲರೂ, ಕಾರ್ಯದರ್ಶಿಯಾಗಿ ಪಿ. ಬಿ. ವಿವೇಕ್ ಮತ್ತು ಖಜಾಂಚಿಯಾಗಿ ಜಿ. ಎಸ್. ಕೃಷ್ಣೇಗೌಡ ಅವರುಗಳೂ ಆಯ್ಕೆಯಾಗಿದ್ದಾರೆ. ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭ ಜು. 12ರಂದು ನಡೆಯಿತು.

ಕೊಪ್ಪ ರೋಟರಿ ಕ್ಲಬ್

ಜು. 15ರಂದು ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭ ಕೆ. ಎಸ್. ಶಾಂತಾರಾಂ ಅಧ್ಯಕ್ಷತೆಯಲ್ಲಿ ನಡೆಯಿತು. ಎಚ್.ಎಸ್. ಶ್ರೀನಿವಾಸ್ ಅಧ್ಯಕ್ಷರಾಗಿ, ಐ. ಎಂ. ದುಗ್ಗಪ್ಪ ಗೌಡ ಕಾರ್ಯದರ್ಶಿ ಮತ್ತು ಎಸ್. ರವೀಂದ್ರ ಪೈ ಖಜಾಂಚಿಯಾಗಿ ಆಯ್ಕೆಯಾಗಿದ್ದಾರೆ.

ಮಲೆನಾಡು ಯಕ್ಷಗಾನ ಕಲಾ ಶಿಕ್ಷಣ ಕೇಂದ್ರ

ಎಂ.ಎಲ್. ರಾಮಚಂದ್ರರಾವ್ (ಅಧ್ಯಕ್ಷರು), ಎಚ್. ಎಸ್. ಮಂಜುನಾಥ್ (ಉಪಾಧ್ಯಕ್ಷರು), ಕೆ. ಆರ್. ಭಾಸ್ಕರಾಚಾರ್ಯ (ಕಾರ್ಯದರ್ಶಿ), ಯು.ಜಿ. ಚಂದ್ರಶೇಖರ್ (ಸಹ ಕಾರ್ಯದರ್ಶಿ), ಎಚ್. ಕೆ. ಶಿವರಾಮರಾವ್ (ಖಜಾಂಚಿ), ಎಚ್. ಜಿ. ವೆಂಕಟರಮಣಯ್ಯ (ಸಂಚಾಲಕರು).

ಇವರುಗಳನ್ನು ಸರ್ವಾನುಮತದಿಂದ ಆರಿಸಲಾಯಿತು.

10.7.87ರಂದು ನಡೆದ ಬಹುಮಾನ ಯೋಜನೆ ಡ್ರಾ ಫಲಿತಾಂಶ:

2737, 2494, 1056

ಕಳ್ಳತನಕ್ಕೆ ಯತ್ನ

ಗುಡ್ಡೇತೋಟ: ಇಲ್ಲಿನ ಅಂಚೆ ಕಚೇರಿ ಮತ್ತು ಪಂಚಾಯ್ತಿ ಕಟ್ಟಡಗಳಿಗೆ ಜು. 8 ರ ರಾತ್ರಿ ಕಳ್ಳರು ನುಗ್ಗಿ ಕಳವು ಮಾಡಲು ಯತ್ನಿಸಿದ್ದು, ಯಾವ ವಸ್ತುವೂ ಕಳವಾಗಿಲ್ಲವೆನ್ನಲಾಗಿದೆ.

ವಾಣಿಜ್ಯ ಪರೀಕ್ಷೆ ಫಲಿತಾಂಶ

ಜಯಪುರದ ವಾಣಿಜ್ಯ ಶಾಲೆಗೆ ಶೇ. 67 ಮತ್ತು ಬಸರಿಕಟ್ಟೆಯ ಶ್ರೀಕೃಷ್ಣ ವಾಣಿಜ್ಯ ಶಾಲೆಗೆ ಶೇ. 81 ಫಲಿತಾಂಶ ಬಂದಿದೆ.

(ವರದಿ: ಎಂ. ವಿ. ಗಂಗಾಧರ್)

ಬೀಳ್ಕೊಡಿಗೆ

ಹರಿಹರಪುರ: ತಾ॥ ಸಹಾಯಕ ಶಿಕ್ಷಣಾಧಿಕಾರಿಯಾಗಿದ್ದ ಎಚ್. ಎಂ. ಮಲ್ಲಯ್ಯನವರನ್ನು ಈ ಕೇಂದ್ರದ ಪ್ರಾಥಮಿಕ ಶಿಕ್ಷಕರು ಜು. 8ರಂದು ಎನ್. ಆರ್. ಶ್ರೀನಿವಾಸ್ ಅಧ್ಯಕ್ಷತೆಯಲ್ಲಿ ಸನ್ಮಾನಿಸಿ ಬೀಳ್ಕೊಟ್ಟರು. ಎಸ್. ವಿ. ಅಡಿಗ ಮುಖ್ಯ ಅತಿಥಿಯಾಗಿದ್ದರು. ಕೆ. ಎಸ್. ಚಂದ್ರಶೇಖರ ರಾವ್ ಸ್ವಾಗತಿಸಿದರು. ತಾ॥ ಶಿಕ್ಷಕ ಸಂಘದ ಅಧ್ಯಕ್ಷ ಕೆ.ಎಂ.ಶೇಷಣ್ಣ ನಾಯ್ಕ್ ಮಲ್ಲಯ್ಯನವರಿಗೆ ಕೇಂದ್ರದ ಶಿಕ್ಷಕರ ಪರವಾಗಿ ಶಾಲು ಹೊದಿಸಿ, ವಂದನಾರ್ಪಣೆ ಮಾಡಿದರು.

ಶಿವಮೊಗ್ಗ ಅಡಿಕೆ ಧಾರಣೆ

ತಾ॥ 18.7.1987

ಸರಕು : 4368 – 5119

ಬೆಟ್ಟೆ : 2117 – 2900

ಗೊರಬಲು: 902

ಸಾಗರ ಅಡಿಕೆ ತಾ॥ 18.7.1987

ಇಡಿ ಅಡಿಕೆ ರೂ. 1869–2099

ಚಾಲಿ ರೂ. 1146–1377

ಸಿಪ್ಪೆ ಗೋಟು ರೂ. 309–561

ಮೆಣಸು ರೂ. 5456–5546

ಮಂಗಳೂರು ಧಾರಣೆ

ದಿನಾಂಕ 16–7–87

ಏಲಕ್ಕಿ ರೂ. 132–160

ಕಾಳು ಮೆಣಸು 5648–5674

ಸಕಲೇಶಪುರ ಏಲಕ್ಕಿ ಧಾರಣೆ

7.7.87ರಿಂದ 10.7.87

ರೂ. 138.00—267.00

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ: ಸಿರಿಮನೆ ನಾಗರಾಜ್, ಅಚ್ಚು ದೀಪಟಿಗೆ ಅಚ್ಚುಕೂಟ, ಕೊಪ್ಪ